ಕಣವಿ
ಕಾವ್ಯ
ಸಂಪುಟ
೧೩

ಜೀನಿಯಾ

ಚೆನ್ನವೀರ ಕಣವಿ



ಜೀನಿಯಾ

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

JEENIYA
A Collection of poems

Written by
Chennaveera Kanavi

Published by
Talukina Venkaniah Smaraka Granthamale
9, Ramya, Gokulam 3rd stage
Mysore - 570 002

Pages : 58 *Price : Rs. 33/-*

First Impression : 1990

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಿಂದ ಮೊದಲನೇ ಮುದ್ರಣ : 2009

Cover Page : Sudakara Darbe

D.T.P. : **LEKHA GRAPHICS**
Mysore -8 Ph: 2482854

Printing : Good Touch Printers, Mysore

ಅರಿಕೆ

ಕಳೆದ ವರ್ಷ ನನ್ನ ಸಮಗ್ರ ಕಾವ್ಯ ಸಂಪುಟ 'ಹೊಂಬೆಳಕು' ಪ್ರಕಟವಾಗುತ್ತಿರುವ ಸಂದರ್ಭದಲ್ಲಿಯೇ ಪ್ರಸ್ತುತ ಸಂಗ್ರಹವನ್ನೂ ಪ್ರತ್ಯೇಕವಾಗಿ ಹೊರತರಬೇಕೆಂಬ ವಿಚಾರವಿದ್ದಿತು. ಆದರೆ ಆಗ ಸಾಧ್ಯವಾಗಿರಲಿಲ್ಲ. ಗುರುಗಳಾದ ಪ್ರೊ. ಮಾಳವಾಡರ ಆತ್ಮಕಥೆ 'ದಾರಿಸಾಗಿದೆ' ಗ್ರಂಥದ ಬಿಡುಗಡೆಯ ಸಮಾರಂಭಕ್ಕೆಂದು ಧಾರವಾಡಕ್ಕೆ ಬಂದಿದ್ದ ಡಾ. ಎಸ್. ವಿದ್ಯಾಶಂಕರ ಅವರು ನನ್ನ ಕವನಸಂಗ್ರಹದ ಪ್ರಕಟಣೆಯ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. 'ಜೀನಿಯಾ' ಸಂಕಲನವನ್ನು ಬಿಡಿಯಾಗಿ ಪಡೆಯಬೇಕೆನ್ನುವ ಕಾವ್ಯಪ್ರೇಮಿಗಳ ಅಭಿಲಾಷೆಯನ್ನು ಅರಿತುಕೊಂಡು ಅವರು ಅದಕ್ಕೆ ಮುಂದಾಗಿರುವುದು ಸಂತೋಷದ ಸಂಗತಿಯಾಗಿದೆ. ತಮ್ಮ ಪ್ರೀತಿ, ಅಬಿಮಾನಗಳನ್ನು ಹೀಗೆ ಸ್ನೇಹಪ್ರಕಾಶನದ ಮೂಲಕ ವ್ಯಕ್ತಪಡಿಸುತ್ತಿರುವ ಡಾ. ಎಸ್. ವಿದ್ಯಾಶಂಕರ ಅವರಿಗೆ ತುಂಬ ಕೃತಜ್ಞನಾಗಿದ್ದೇನೆ.

ಇಲ್ಲಿಯ ಕೆಲವು ಕವನಗಳನ್ನು ಈ ಮೊದಲು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಪಾದಕ ಮಿತ್ರರನ್ನು ನಾನು ನೆನೆಯಬೇಕು. ಗೆಳೆಯ ಡಾ. ಜಿ.ಎಸ್. ಶಿವರುದ್ರಪ್ಪನವರು ತಮ್ಮ ಬಿಡುವಿಲ್ಲದ ಕೆಲಸಗಳಲ್ಲಿಯೂ ಕರಡು ನೋಡಿ ನೆರವಾಗಿದ್ದಾರೆ. ರಶ್ಮಿ ಮುದ್ರಣದವರು ಅಂದವಾಗಿ ಅಚ್ಚು ಮಾಡಿದ್ದಾರೆ. ಅರ್ಥಪೂರ್ಣವಾದ ಮುಖಚಿತ್ರದಿಂದ ಕಳೆಕಟ್ಟಿದವರು ಕಲಾವಿದ ಶ್ರೀ ನಾಗರಾಜ್‌ರವರು. ಇವರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಧಾರವಾಡ — ಚೆನ್ನವೀರ ಕಣವಿ

೬-೭-೧೯೯೦

ಕೃತಜ್ಞತೆಯ ನುಡಿ


ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದು ವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥ ಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚು ಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳು ತ್ತೇನೆ.

ನನ್ನ 'ಸಮಗ್ರ ಕಾವ್ಯದ' ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯ ವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯ ವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ | ಚೆನ್ನವೀರ ಕಣವಿ

೨೪ - ೮ - ೨೦೦೯

ಪರಿವಿಡಿ



೧೯೮೬ರಲ್ಲಿ ಕವಿ ಕಣವಿಯವರು

(ಭಾವಚಿತ್ರ : ನಾರಾಯಣರಾವ್ ಕುಲಕರ್ಣಿ, ವಿಜಾಪುರ)

ಜೀನಿಯಾ

ಎಣಿಸಿ, ಬಿಡಿಬಿಡಿಸಿ ಹೇಳಬಹುದಾದಷ್ಟು-
ರೆಕ್ಕೆಯಂತೆ
ಜೋಡು ಜೋಡೆಲೆ ಬಿಟ್ಟು,
ಕವಲು ನಾಲ್ಕಾರು ಒಡೆದು, ಮೇಲೆದ್ದು
ನೆಟ್ಟಗೆ ದೇಟು
ದೇಟಿನ ತುದಿಗೆ ಹೂಬಿಟ್ಟ ದಿಟ್ಟತನ.
ದಟ್ಟ ಪಕಳೆಗಳು ಸುತ್ತು -
ನಟ್ಟ ನಡುವೆ
ಬೀಜಕಣಿಯಾದ ಗುಂಡು-ಕೇಸರ-ಬಂಡು.
ಹಣತೆ ಹಚ್ಚಿಟ್ಟಂತೆ ಸಂತುಷ್ಟಿ.

ಗಾಳಿ ಬೀಸಿದರೆ
ತುಸುವೂ ಗಾಸಿಯಾಗದೆ,
ಬಾಗಿ, ಬಳುಕಿ
ಬಾಡಿ ಉದುರಿ ಹೋಗದೆ -
ಆಡಾಡುತ್ತ ಪಾತರಗಿತ್ತಿ
ಬಂದು ಕುಳಿತಾಗ
ನೋಡಿ
ತಲೆಯಾಡಿಸುವದು.

ಬೇಕಿಲ್ಲ ದಿನವೂ ನೀರಿನಾರೈಕೆ,
ವಾಸನೆಯ ಸೋಕಿಲ್ಲ.
ಗಟ್ಟಿ ಬಣ್ಣದ ನಿಂತ ನಿಲವಿನಲೆ
ತಟ್ಟನೆ ಕಣ್ಣು ಸೆಳೆಯುವದು,

ಕವಿಸಮಯದ
ಕುಸುಮ ಕೋಮಲತನಕೆ
ಧಕ್ಕೆ :
ಏನು ಹೇಳುತ್ತೀರಿ ನೀವಿದಕ್ಕೆ?

ಜರ್ಬರಾ

ಗಡ್ಡೆ ಹೌದೊ, ಅಲ್ಲವೊ
ಒತ್ತಾಗಿ ಸುತ್ತ ಹರಡಿರುವ ಬೇರುಗಳ
ಗೇಣುದ್ದ ಜಾಲ.
ಬೇಸಗೆಯಲ್ಲಿ
ಮಣ್ಣಿನೊಳಗಿದ್ದು ಇಲ್ಲದಂತೆ.
ಮೊದಲ ಮಳೆ ಬಿದ್ದೊಡನೆ
ನೆನಹು
ಒಡಮುರಿದೆದ್ದು
ನೆಲದಿಂದಲೇ
ಹಿಡಿಯಷ್ಟು ಹಸಿರು ಗರಿ ಬಿಚ್ಚಿ
ನಡುವೆ ಒಂದೆರಡು ಮೊಗ್ಗೆ
ಉದ್ದಗಣೆ ತುದಿಗಿದ್ದು
ಬಿಚ್ಚುವವು
ಬಣ್ಣಬಣ್ಣದ ಛತ್ರಿ-
ಗಾಳಿಗೋಲಾಡುತ್ತ
ಹಗಲು-ರಾತ್ರಿ.
ಸದ್ದಿಲ್ಲದೆಯೆ
ಚೆಲುವು ಬಾವುಟವೆತ್ತಿ
ನಿತ್ಯ ಗೆಲ್ಲುವದು
ಜೀವನಶ್ರದ್ಧೆ -
ತುಂಬಿ ಬುದ್ಧಿ - ಭಾವದ ಕೊರತೆ.
ಜರ್ಬರಾ:
ಅಬ್ಬರವಿಲ್ಲದಪ್ಪಟ ಕವಿತೆ.

ಮನುಷ್ಯ – ಪ್ರಕೃತಿ

ತಿರಸ್ಕೃತ ಕಸ ಕಡ್ಡಿ, ಎಲೆ ಕಳಿತು ಗೊಬ್ಬರವಾಗಿ
ಮೆಲ್ಲಗೆ ಬೀಜ ಮೊಳೆತು, ಪುರಸ್ಕರಿಸಿ ಹಳತು - ಹೊಸತು
ಸಸಿ ಮೇಲೆದ್ದು, ಕಣ್ ಸೆಳೆದು ಬೆಳೆದು ಗಾಳಿಗಲ್ಲಾಡುತ್ತಲೇ
ನೆಟ್ಟಗೆ ಗಟ್ಟಿತನ ಪಡೆದು, ದಿಕ್ಕು ದಿಕ್ಕಿಗೆ ಸ್ವತಂತ್ರ
ಟೊಂಗೆಗಳ ಚಾಚಿ ವಿವಿಧ ಭಂಗಿಯಲಿ-
ಗಾಳಿವೇಗಕ್ಕೆ ತಕ್ಕ ನಾಟ್ಯ, ಬಿಟ್ಟುಕೊಡದಂತೆ ತನ್ನ
ದಾರ್ಢ್ಯ, ಸೂರ್ಯ ಮೇಲೇರಿ ಕೆಳಗಿಳಿದಂತೆ ನೆರಳು
ಚಿತ್ರ ವಿಚಿತ್ರ ಬಿಡಿಸಿ, ಮೋಡ ಅಡ್ಡೈಸಿದರು ಮೂಡು
ಕೆಡದಂತೆ ಮೂಡಿಸುವ ಕಲೆ.

ನೂರು ಬಗೆ ಹಕ್ಕಿ ಅತಿಥಿಗಳಂತೆ, ಇಲ್ಲ ಬಂಧು ಬಳಗವೇ
ಎಂಬಂತೆ ನಿಶ್ಚಿಂತ ಕುಳಿತು, ದೂರದೂರದ ಅರಣ್ಯದ ಸುದ್ದಿ
ಚಿಲಿಪಿಲಿಸಿ, ಒಂದಿಷ್ಟು ಕೊರಳು ಸರಿಪಡಿಸಿ, ಹಾಡಿ
ಚುಂಚು ತಿಕ್ಕಿ, ಗರಿ ಹಿಗ್ಗಲಿಸಿ ಕೊಡವಿ ಹಿಕ್ಕೆ ಹಾಕಿ
ಮತ್ತಾವ ನೆನಪೊ, ಸಿಕ್ಕತ್ತ ಹಾರಿ ಮರೆಯಾಗುವವು.
ಆಳದ ಬೇರಿನಿಂದ ನಿರಾಳ ಟೊಂಗೆ - ಟಿಸಿಲಿನವರೆಗು
ಮರಮರಗಳ ವಿಚಿತ್ರ ನೋವು-ನಲಿವು.

ಸ್ವಲ್ಪ ಕಾಲೆತ್ತರಿಸಿದರೆ ಕನಸುಗಳು ಕೈಗೆಟಕಿ
ಬಿಡುವಂತೆ ಹೂ ಬಿಟ್ಟು, ಎಲೆಯ ಮರೆಯಲ್ಲಿ ಕೆಲವು,
ಹೊರಗೂ ಹಲವು ಹಣ್ಣು ಕಾಯ್‌ಗೊಂಚಲು
ತೂಗಿ, ಮೈಚಳಿ ಬಿಟ್ಟು ಋತುಮಾನಕ್ಕೆ ತಕ್ಕಂತೆ -
ಶಬ್ದಕೋಶಗಳಲ್ಲಿ ಸಿಗದ ಬಣ್ಣಗಳ ಎಲೆ ಎಲೆಯಲ್ಲಿ

ಹಿಡಿದು ಬಯಲಿಗುಡುಗೊರೆಯಾಗಿ ಮುಗಿಲೆಡೆಗೆ ದೃಷ್ಟಿ.
ಮಳೆಯಲ್ಲಿ ತಟಸ್ಥ, ಅಂತರ್ಮುಖಿಯಾಗಿ ನೆನೆದು
ನಿಂತ ಮೇಲೂ ಎಲೆದುಟಿಯಲ್ಲಿ ತಟಪಟ ಮಂತ್ರ.

ಎಲೆಯುದುರುವಾಗ ನಿರ್ಭಾವದಲ್ಲಿ ನಿಂತ, ಗಾಳಿಯಲ್ಲಿ
ಗಿರಿಗಿರಿ ತಿರುಗಿ, ನೆಲವನಪ್ಪುವುದ ನೋಡುವ ಸಂತ.
ಇಡಿಯ ಮರವೀಗ ಎಲೆಯ ಮರ್ಮರವಿರದ ಮೂಲಾಕೃತಿ.
ಬರುವ ಸಂವತ್ಸರಕೆ ಬರೆದ ಭರವಸೆಯ ನಕ್ಷೆ.
ಕಾಯುತ್ತದೆ ವಸಂತಕ್ಕೆ ನೆನಪು - ಹಸಿಯುಳಿಸಿಕೊಂಡು
ಅನುಭವಿಸುತ್ತ ಈ ಬಗೆಯ ಬರಡು ಶಿಕ್ಷೆ.

ಕಾಯಲಾರದೆ ಮನುಷ್ಯ ಕೊಡಲಿಯೆತ್ತುತ್ತಾನೆ:
ಮಾಯಲಾರದ ಗಾಯ ಭವಿಷ್ಯಕ್ಕೆ, ಭೂತಕ್ಕೆ ಬಲಿ?
ಒಂದೊಂದು ಏಟಿಗೆ ಒಂದೆಡೆಗೆ ಭೂಕಂಪ
ಮತ್ತೊಂದೆಡೆಗೆ ಚಂಡಮಾರುತ, ನೂರು ಅಪಘಾತ.
ಕಡಿದ ಟೊಂಗೆಯ ಬದಿಗೆ ಚಿಗುರು ಪಿಳಿಪಿಳಿಕಣ್ಣು,
ಅನುಮಾನಿಸುವ ಮೊಗ್ಗೆ; ಈ ಮನುಷ್ಯನ ಬಗ್ಗೆ
ಎಲ್ಲೆಡೆಗು ಸಂಶಯವೆ. ಇದರ ತಣ್ಣೆಳಲಲ್ಲಿ ಕುಳಿತು
ನಲ್ಲೆಯ ಗಲ್ಲ ಮುಟ್ಟಿ, ಮಗುವ ಮುದ್ದಿಸಿದವನು
ಹೂ ಹಣ್ಣು ಕಾಯಿಗಳ ಪಡೆದು ಗುಡಿಗೆ ಹೋದವನು
ಯಾರು? ಹೌದು, ಇವನೆ, ಈ ಮನುಷ್ಯನೆ.

ಹೂವು ಹೊರಳುವವು

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ, -
ಇರುಳಿನ ಒಡಲಿಗೆ, ದೂರದ ಕಡಲಿಗೆ
ಮುಳುಗಿದಂತೆ, ದಿನ ಬೆಳಗಿದಂತೆ
ಹೊರ ಬರುವನು ಕೂಸಿನ ಹಾಗೆ.

ಜಗದ ಮೂಸೆಯಲಿ ಕರಗಿಸಿ ಬಿಡುವನು
ಎಲ್ಲ ಬಗೆಯ ಸರಕು;
ಅದಕ್ಕೆ ಅದರ ಗುಣದೋಷಗಳಂಟಿಸಿ -
ಬಿಡಿಸಿಬಿಟ್ಟ ತೊಡಕು.

ಗಿಡದಿಂದುದುರುವ ಎಲೆಗಳಿಗೂ ಮುದ-
ಚಿಗುರುವಾಗಲೂ ಒಂದೆ ಹದ.
ನೆಲದ ಒಡಲಿನೊಳಗೇನು ನಡೆವುದೋ
ಎಲ್ಲಿ ಕುಳಿತಿಹನೊ ಕಲಾವಿದ.

ಬಿಸಿಲ ಧಗೆಯ ಬಸಿರಿಂದಲೆ ಸುಳಿವುದು
ಮೆಲು ತಂಗಾಳಿಯು ಬಳಿಗೆ.
ಸಹಿಸಿಕೊಂಡ ಸಂಕಟವನು ಸೋಸಲು
ಬಂದೆ ಬರುವುದಾ ಗಳಿಗೆ.

ಸಹಜ ನಡೆದರೂ ಭೂಮಿಯ ಲಯದಲಿ
ಪದಗಳನಿರಿಸಿದ ಹಾಗೆ.
ವಿಶ್ವದ ರಚನೆಯ ಹೊಳಹಿನಲ್ಲಿ
ಕಂಗೊಳಸಿತು ಕವಿತೆಯು ಹೀಗೆ.

ಶರಣಭಾವಕ್ಕೆ ಹೊಸರೆಕ್ಕೆ

ಮಠ-ಪೀಠ-ಪಲ್ಲಕ್ಕಿ: ಸಂದಿಗ್ಧ ಸಂಕೇತ.
ಹತ್ತಿ ಮೆರೆದವರು ಇಳಿದು ಹೋದರು ಧರಾತಳ-
ದೊಳಗೆ. ನಿಜದ ನಿಲವಿಗೆ ತೂಗಿನಿಂದವರು, ಒಳ-
ದನಿಗೆ, ತಿಳಿವಿಗೆ ತಮ್ಮನೊಡ್ಡಿ, ಸಂಪದ್ಭರಿತ
ಜನಸಮೂಹದಿ ಬೆರೆತು, ಮೂಢ ರೂಢಿಯ ಕೀಲಿ
ಜಡಿದ ಬಾಗಿಲು ತೆರೆದು, ಮೂಲೆಮೂಲೆಯ ಜೇಡ-
ಬಲೆ ಗುಡಿಸಿ, ಪೊರಕೆ ಹಿಡಿದುದೆ ಹರಕೆ, ಉದ್ದಂಡ.
ಮುಳ್ಳು ಹೂವಾಗಿ ಅರಳಿತು ಮನೆ - ಮನದ ಬೇಲಿ.

ಎದ್ದೇಳಬೇಕು ಹೀಗೆ ಸದ್ದುಗದ್ದಲವಿರದೆ
ಕನಸುಗಳ ಕಂಡರಿಸೆ, ಶುದ್ಧ ಮನಸಿಗೆ ಬುದ್ಧಿ
ಸದಾ ಬೆಂಬಲಿಸಿ, ಹೃದಯ ಹಂಬಲದೊಳದ್ದಿ.
ಆಕಾಶ ಗೋಪುರಕೆ ಭೂಮಿ ಗದ್ದುಗೆ ಎಂದೆ.
ಸಂಕಲ್ಪದೊಳಗೆ ಸಂಕೇತ ಕರಗಿಸಿ, ಶರಣ
ಭಾವಕ್ಕೆ ಹೊಸರೆಕ್ಕೆ: ಮುಟ್ಟು ನೀಲಾಂಗಣ.

ಒಲವು

ಒಲವಿನಿಂದಲೆ ನಲಿವು, ನಲುಗದಂತಿದೆ ಚೆಲುವು,
ಬಿರುಗಾಳಿಗಲ್ಲಾಡಿದರು ನಿಶ್ಚಲದ ನಿಲವು.
ದೂರದಾಳದಲಿ ಬೇರು: ಮೇಲೆ ಎಲೆ ಕೋಮಲ.
ನೆಲಕಚ್ಚಿ ಹೀರುತ ನಿತ್ಯ ಸಂಸಾರ ಸಫಲ.
ಹೂವು ಬಿಡದಲೆ ಕಾಯಿ ಹಿಡಿವ ಗಿಡವೂ ಉಂಟು,
ಕಾವು ಕೂರುವ ಹಕ್ಕಿ ಬಿಡಿಸಲಾರದ ನಂಟು.
ತೆರಿಗೆ ಹೇರದ ರಾಜ್ಯ ಹುಡುಕಿದರೆ ಸಿಗಬಹುದು,
ಹೆರಿಗೆ ನೋವಿರದ ತಾಯನೆಲ್ಲಿ ತರಬಹುದು?

ಮುಗಿಲಿನಂಗಳದಿ ಸೆಲೆಯೊಡೆದು ಮಿಂಚಿದ ಮೋಡ
ಯಾವ ಗೂಢ? ಕಾಡಿನ ಬಾಹುಬಂಧನ ಕೂಡ
ಸಡಿಲಿ, ನಡುಸರೋವರ ಬತ್ತಿ, ಪಕ್ಷಿಗಳ ವಲಸೆ.
ಹೊಲದುದ್ದ ನೇಗಿಲನೆಳೆವ ಎತ್ತಿಗೊತ್ತಾಸೆ.
ಒಲವಿನೆಳೆ ಹಿಡಿದು ಹೊರಟರೆ, ಸೃಷ್ಟಿ ಮೂಲಕ್ಕೆ
ಮುಟ್ಟಿ, ಅಂತಃಕರಣ ತಟ್ಟಿ ಬರುವೆ ಮೇಲಕ್ಕೆ.

ಪ್ರೀತಿ – ಸಂಬಂಧ

ಪ್ರೀತಿ -ಸಂಬಂಧಗಳ ಸಡಿಲುಗೊಳಿಸದೆ ಹಿಡಿವ
ಕರುಳ ಬೆರಳಿನ ವಿರಳ ಕೌಶಲ್ಯ: ಜೀವನದ
ಮೌಲ್ಯ ಕೂಡಿ ಬಾಳಲಿಕೆಂದೆ ಕಾದಾಟ. ಕದ
ಮುಚ್ಚಿ ತೆರೆವಷ್ಟರಲಿ ಹದಗೊಳುವುದೇ ಜೀವ?
ನಮ್ಮ ಮಾತೇ ನಮಗೆ ಅಸ್ಪಷ್ಟ; ಸಂವಹನ-
ಕೆಲ್ಲಿದೆ ಹಾದಿ? ಶಬ್ದಕ್ಕೆ ತಡಕಾಡಿ, ಮುರಿದ
ಸೇತುವೆ ಕಟ್ಟಿ ದಾಟಿದರೆ ಅಷ್ಟೆ ಸಂಮೋದ,
ಕೃತಿಯಲ್ಲಿ ಒಡಮೂಡಿ ಪ್ರೀತಿ ತಳೆವುದು ಮೌನ.
ಆಗ ಮಾತಿನ ರೀತಿ ಎಣ್ಣೆ-ಬತ್ತಿಗೆ ಜ್ಯೋತಿ.
ಸಂತೋಷದಭಿವ್ಯಕ್ತಿ ಮುಕ್ತ ಸಂಬಂಧಕ್ಕೆ
ಶಕ್ತಿ. ಯೋಚಿಸದೆ, ಯಾಚಿಸದೆ ತನ್ನಷ್ಟಕ್ಕೆ
ಸಂಭವಿಸಿ ನಿತ್ಯದ ರೂಢಿ-ರಂಗು-ಸಂಗಾತಿ.
ತೆರೆದ ತೋಳಿಗೆ ಕುಸಿದವರನೆತ್ತಿ ತಬ್ಬುವದು
ಅಪೂರ್ಣತೆಯರಿತು ಆಜನ್ಮ ಸ್ವೀಕರಿಸುವದು.

ಒಂದು – ಹಲವು

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವದು?-
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವದು,
ಒಂದು ಕವಿತೆಗೆ ಕೂಡ ಮನ ಕರಗಬಹುದು.

ಹಲವು ಬಣ್ಣದ ಕಣ್ಣು ಸೆಳೆಯುವ ಗುಲಾಬಿಗಳು:
ಸುಂದರ ಪ್ರದರ್ಶನಕೆ ಕಸಿಗೊಂಡ ಒನಪು;
ಚೆಂಗುಲಾಬಿಯ ಕಂಪು ಕೋಮಲತೆ, ನಯವೊಂದೆ
ಕಣ್ಣು, ಮನಸಿಗೆ ತಣ್ಣಗೊಂದು ಸವಿನೆನಪು.

ಆಕಾಶದಲ್ಲಿ ಹಲವು ಚಿಕ್ಕೆ ಚೆಲ್ಲಾಪಿಲ್ಲಿ-
ಬಿದಿಗೆ ಚಂದ್ರನ ಬದಿಗೆ ಒಂದೆ ಕಿರು ತಾರೆ.
ಉದಯಾಸ್ತಗಳ ಹೊನ್ನ ಬೆಳಕು ಚಿಮ್ಮುವ ತವಕ-
ತುಂಬಿ ತುಳುಕದ ಹಾಗೆ ಆ ಕ್ಷಿತಿಜ ಮೇರೆ.

ಹಲವಕ್ಕೆ ತೆಕ್ಕೆ ಬಿದ್ದರೆ ಎಲ್ಲ ದಕ್ಕಬಹುದೆ
ವೈವಿಧ್ಯಕ್ಕು ಒಂದೆಡೆಗೆ ಮಧ್ಯಬಿಂದುವಿರದೆ?

ನೇಣು ನುಡಿದದ್ದು

ಇಲ್ಲ, ಈ ಕ್ರೂರ ಸರಕಾರಕ್ಕೆ ನಾನು ಹುರಿಗೊಂಡಿಲ್ಲ,
(ಬೆಳ್ಳಗಿದ್ದರು ಇದು ಕುದಿವ ಸುಣ್ಣದ ನೀರು)
'ಇಪ್ಪತ್ತೆಂಟರ ಗಂಡು ಗಂಟಲವ ಬಿಗಿಯಲೆ?
ಬಿಡುಗಡೆಯ ಹಾಡು ಹೊಡಮರಳಿ, ಕಪ್ಪು ಕಾಡಿನ
ಕೆಂಪು ಜ್ವಾಲೆಗಳಾಗಿ ಹರಡುವವು. ದಿಕ್ಕು ದಿಕ್ಕಿನ
ಮೊರೆ - ಕರೆಗಳಪ್ಪಳಿಸಿ ತತ್ತರಿಸಿದವು ಪ್ರಿಟೋರಿಯದ
ಕಲ್ಲು ಜೇಲಿನ ಗೋಡೆ. ಬೋಥಾನ ಹಿಂದಿದೆ ಭೂತ.
ಭವಿಷ್ಯದ ಮಿಂಚಿನಂಚಿಗಿದೆ: 'ನಿಕೊಸಿ ಸಿಕೆಲೆ
ಆಫ್ರಿಕಾ'. ಗಲ್ಲುಗಂಬದವರೆಗು ಧೀರ ಹೆಜ್ಜೆ.
ಪ್ರತಿಧ್ವನಿ: 'ಇಂದಿಲ್ಲ ನಾಳೆ ಕಪ್ಪು ಪ್ರಜೆ ಆಳಿಬಾಳುವದು
ನಿಶ್ಚಿತ ; ಇದೇ ದಾರಿ, ಅಂಜದಿರಿ, ಹೋರಾಟವೊಂದೆ ಸತತ'-
ತಾಯಿ ಮುಟ್ಟಿಸಿದಳೀ ಕೊನೆಯ ಸಂದೇಶ: 'ಮಕ್ಕಳ ಬೆನ್ನು ತಟ್ಟಿ,
ಜೊತೆಗಿದ್ದು ಗಟ್ಟಿ ಕೈ ಕೈ ಹಿಡಿದು ಧೈರ್ಯದಲಿ ಮುಂದೆ ಸಾಗಿ.
ಕರುಣೆ ತೋರಿದ್ದು ಒಬ್ಬ ಮಗನಿಗೆಂದೆ? ಅಲ್ಲ, ಇಡಿ ದೇಶಕಾಗಿ.
- ಇದಕೆಲ್ಲಕೂ ನಾನು ಸಾಕ್ಷಿ. ನನ್ನೊಳಗಿನೆಳೆಯು ಸೆಳೆದಿದೆ ನೋವು.
ನನ್ನ ಕತ್ತರಿಸಿ, ತಿಳಿಯದೆ ನಿಮಗೆ? ಈ ಕೊರಳು ಬಿಗಿಯಲಾರೆ.

ಕುಂದಣ

(ಪ್ರೊ. ಕೆ.ಜಿ. ಕುಂದಣಗಾರ)

ಬಾಳ ಅಗ್ಗಿಷ್ಟಿಯಲಿ ಬೆಂದುನೊಂದರೂ ಒಂದು
ಕುಂದಿರದ, ಅಂಗಾರವಡಗಿಸಿದ ಬಂಗಾರ-
(ಕೌಜಲಗಿಯಿಂದ ಕೊಲ್ಲಾಪುರಕೆ ಸಿಂಗಾರ)
ಕರಗಿ, ದಿಟಪುಟಗೊಂಡು, ಒರೆಬಣ್ಣಕ್ಕೆ ಬಂದು
ಬೀರಿದ ಮಂದಹಾಸ; ಸಾಹಸದ ವಿನ್ಯಾಸ.
ಶೋಧನದ ದೀವಿಗೆ ಹಿಡಿದು ಮೂಲೆಮೂಲೆಗೆ-
ಶಿಲಾಶಾಸನ, ತಾಮ್ರಪಟ, ನಾಣ್ಯ, ತಾಡೋಲೆ-
ಕಂಡು ಹಿರಿಹಿರಿ ಹಿಗ್ಗಿ ಒಡಮೂಡಿದಿತಿಹಾಸ-
ಪರಿಹರಿಸಿತಾಯಾಸ. ಸಂಸ್ಕೃತಿಯ ಕಡೆದ ಕಲೆ
ಮಿಡಿದ ಕಾವ್ಯದ ಹೊನಲು, ಪಡೆದ ಜನಜೀವನ
ನಡೆದು ಬಂದಿಹ ದಾರಿ ತೆರೆದು ತೋರಿದ ಬೆರಳ
ಹಿಡಿದು ಮುನ್ನಡೆದ ಶಿಷ್ಯಪಡೆ: ನಿಮಗಷ್ಟರಲೆ
ತೃಪ್ತಿ: ಮಾಡಿದ್ದು ಮನದಲ್ಲಿ ಹೊಳೆಯದವರು
ಆ ಸತ್ವ ತಾತ್ವಿಕತೆ ಈ ಕನ್ನಡದ ತೇರು.

ಪುಟ್ಟ ಹಕ್ಕಿಯ ಪಾಡು

ಕೈ ತೋಟದಲಿ ದಾಳಿಂಬೆಯ ರೆಂಬೆಗೆ
ಮಕ್ಕಳ ಟೊಪ್ಪಿಗೆಯಂತೆ ಜೋತ ಚಿಕ್ಕ ಗೂಡಿನೊಳಗೆ
ಕೊಂಚ ಬಾಗಿದ, ಉದ್ದ ಚುಂಚಿನ ನಸುಹಸುರು ಬಣ್ಣದ
ಪುಟ್ಟ ಹಕ್ಕಿ ಕತ್ತು ಚಾಚಿದ್ದು ಕಂಡೆ.
ದಿನವೂ ಇಲ್ಲೇ ಹಾಯ್ದಾಡಿದರೂ ಈ ಗೂಡಿನ ಕುಶಲಕರ್ಮ
ನನ್ನ ಕಣ್ಣಿಗೆ ಹೇಗೆ ಬೀಳಲಿಲ್ಲ?- ಎಂದು ಅಚ್ಚರಿಗೊಂಡೆ.
ಅದಕ್ಕೇನನಿಸಿತೊ ಬುರ್‌ನೆ ಹೊರಬಿದ್ದು
ಪಿಟಕ್ ಪಿಟಕ್ ಎಂದು ಗಾಳಿಯಲ್ಲಿ ಜಿಗಿಯುತ್ತ
ಅತ್ತ ಹಾರಿಹೋಯಿತು.
ಹತ್ತಿ, ಅರಳಿ ಮೆತ್ತಗೆ ಒಳಗೆ; ಕಡ್ಡಿ, ದಾರದ ಹೆಣಿಕೆ ಹೊರಗೆ -
ಮಾಟವಾಗಿತ್ತು ಗೂಡು. ಹಕ್ಕಿ ಬಂದು ಸ್ವಸ್ಥಕುಳಿತುಕೊಂಡಾಗ
ಅದಕ್ಕರಿವಿಲ್ಲದಂತೆ ಆಗಾಗ ಕಂಡು, ಮನಸ್ಸು ಅರಳಿಸಿಕೊಂಡೆ.

ಹಾಗೇ ಒಮ್ಮೆ ಗೂಡಿನಲ್ಲಿಣಿಕಿದೆ:
ಕಂದು ಬಣ್ಣದ ಎರಡು ಚಿಕ್ಕ ತತ್ತಿಗಳು.
(ಚಿಕ್ಕವನಿದ್ದಾಗಿನ ಕುತೂಹಲವೆ ನನಗೆ ಈಗಲು.)
ಮತ್ತೆರಡು ದಿನ ಕಳೆದಾಗ ತತ್ತಿಯ ಮೇಲೆ ಅಲ್ಲಲ್ಲಿ ಚುಕ್ಕಿಗಳು.
ಆ ಹಕ್ಕಿ ಹುಳ-ಗಿಳ ಹಿಡಿಯುತ್ತಿರಬಹುದು ಎಂದುಕೊಂಡಿದ್ದೆ-
ಹೂವಿನೊಳಗೆ ಚುಂಚಿಟ್ಟು ರಸ ಹೀರುವುದು ಕಂಡು ಆಶ್ಚರ್ಯಪಟ್ಟೆ.
(ಬಣ್ಣದ ಚಿಟ್ಟೆಗಳನ್ನು ಸ್ವಲ್ಪ ಕಾಲ ಮರೆತು ಬಿಟ್ಟೆ).
ಹಕ್ಕಿಯ ರೆಕ್ಕೆಯಲ್ಲಿ ಕುಳಿತು ಹಗಲಿರುಳು ಹಾರಿದವು.
ಆಗಲೇ ತತ್ತಿಯೊಡೆದು ಮಾಂಸಲ ಮುದ್ದೆ.
ಹೊಳೆದದ್ದು ಬರೀ ಬಟ್ಟಲುಗಣ್ಣು. ಮರಿಗಳು ಬೆಳೆದು

ದೊಡ್ಡವಾದಂತೆ, ಚಿಂವ್‌ಗುಡುವುದನ್ನು, ತಾಯಿ ಗುಟುಕಿಡುವುದನ್ನು ಉತ್ಸುಕತೆಯಿಂದ ಚಿತ್ರಿಸಿಕೊಂಡೆ.

ಒಂದು ಮಧ್ಯಾಹ್ನ ಊಟ ಮುಗಿಸಿ, ಪುಸ್ತಕ ಹಿಡಿದು ಅಡ್ಡಾಗಿದ್ದೆ.
ಕಿಟಕಿಯ ಹೊರಗೆ ಒಮ್ಮೆಲೆ ಚಿರ್‌ಬರ್ ಚಿಂವ್‌ಚಿಕ್ ಚೀರಾಟ!
ಗಡಬಡಿಸಿ ಎದ್ದು ದಾಳಿಂಬೆಗಿಡದ ಬಳಿ ಧಾವಿಸಿದೆ:
ಗೂಡು ಹರಿದು ಕೆಳಗೆ ಬಿದ್ದಿತ್ತು. ಮೆಲ್ಲಗೆ ಎತ್ತಿ ನೋಡಿದೆ.
ಮರಿಗಳೇ ಇರಲಿಲ್ಲ. ಎದುರಿನ ಗಿಡದಲ್ಲಿ ಕಪ್ಪು ಕಾಗೆ-
ಗುಳುಗುಳು ನುಂಗಿ ಚುಂಚು ತಿಕ್ಕುತ್ತಿತ್ತು.
ಪುಟ್ಟ ಹಕ್ಕಿ ಚಡಪಡಿಸಿ ಬಿಕ್ಕುತ್ತಲೇ ಇತ್ತು.
ದಾಳಿಂಬೆಯ ಕೆಂಪು ಹೂ ನೆಲದಲ್ಲಿ ಚೆಲ್ಲಾಡಿತ್ತು.

‘ಕ್ರೋಧನ’ಕ್ಕೆ ಬೀಳ್ಕೊಡುಗೆ

ಟೊಂಗೆಗಳನತ್ತಿತ್ತ ಕಡಿದು, ಬೊಡ್ಡೆಗಲ್ಲಲ್ಲಿಕಚ್ಚು
ಹಾಕಿದರು, ಮತ್ತೆ ಚಿಗುರಿದೆ ಮರ-
‘ಕ್ರೋಧನ’ವೆ ಸಾವಧಾನದಿ ನಿನ್ನ ಬೀಳ್ಕೊಡುವೆ,
‘ಕ್ಷಯ’ಕೆ ಮದ್ದುಂಟು; ‘ಪ್ರಭವ’ಕ್ಕೆ ಕಣ್ಣು ತೆರೆದೆ.

ಸೃಷ್ಟಿ-ಸ್ಥಿತಿ-ಲಯದ ಎಡೆಬಿಡದ ಗೂಢ ವಿನ್ಯಾಸದಲಿ
ಆ ಮಾವು - ಈ ಬೇವು, ನಡುವೆ ‘ಕೂಹು ಕೂಹು’,-
ಹೂ ಹೂವಿನೊಳಗೆ ಕೆರಳಿ, ನರಳಿ, ಅರಳಿದ ನೋವು-
ಬಿಸಿಲು ಬಲಿಯುವ ಮೊದಲೆ ಬಲಿಗೊಂಡ ಕಾವು.

ಉರಿವ ಸೂರ್ಯನ ಕಾರ್ಯವೈಖರಿಗೆ ತಣ್ಣಗಾದನು
ಚಂದ್ರ;ಪೃಥ್ವಿಯ ಪರಿಭ್ರಮಣ ತಾರ-ಮಂದ್ರ;
ತುಂಬಿ ತುಳಿಕಿಸಿತೆನುವ ಕನಸು ಬೀಳುವ ಮೊದಲೆ
ತಳದಲ್ಲಿ ವಾಸ್ತವದ ಸಣ್ಣ ರಂಧ್ರ.

ಇಪ್ಪತ್ತೊಂದನೇ ಶತಮಾನಕ್ಕೆ ಜಿಗಿದುಹಾರುವ ಮಲ್ಲ
ಹದಿನಾಲ್ಕು ವರ್ಷ ವನವಾಸ ಹೇಗೆ ಕಾಣುತಿಲ್ಲ?
ಗಾಯ ಮಾಯದೆ, ಹಿಡಿದ ಸೇಡಿನ ಕೊಳ್ಳಿ ನಂದಿಸದೆ
ಇಡಿಯಾಗಿ ನಾಡು ಸ್ಪಂದಿಸದೆ ಮುಂದೆ ಹೆಜ್ಜೆಯಿಲ್ಲ.

ಅವರೆದೆಯ ಡವಗುಟ್ಟುವಿಕೆ ನಮ್ಮ ಕಿವಿಗಪ್ಪಳಿಸಿ,
ಗಟ್ಟಿ ಬೆಸೆದಾಗ ಹೃದಯಕ್ಕೆ ಹೃದಯ ಕರಗಿ;
ದೈವರೇಖೆಗಳು ಒಂದರೊಡನೊಂದು ಹೆಣೆದಿರುವಾಗ
ನಡೆಯಲಾರೆವು ನಾವು ಒಬ್ಬಂಟಿಯಾಗಿ.

ಪ್ರಶ್ನೆ

ಮುಷ್ಟಿಯಲಿ ಜೀವ ಬಿಗಿ ಹಿಡಿದು ಮಲಗಿದೆ ಮಗುವು-
ಏಕೆ ಈಪರಿ ಕೆಂಪು ಕಣ್ಣು ತುಂಬ?
ಯಾವ ಜೀವದ ರಕ್ತ ಬಸಿದು, ಬಾನಂಚಿನಲಿ
ಹೆಪ್ಪು ಗಟ್ಟಿತು ಹೀಗೆ ಸೂರ್ಯಬಿಂಬ?

ಎಷ್ಟೊಂದು ಹಗಲು ಬರಿ ಹೆಗಲುಗೊಟ್ಟವೊ ನಿನಗೆ-
ಹುಗಿದು ಹೋದವೊ ಚಿಕ್ಕೆ ಮಿನುಗದಂತೆ!
ಕರುಳೆಂಬುದೊಂದು ಒಳಗೆಲ್ಲಿಯಾದರು ಇಹುದೆ?
ಮುಗಿಲೇಕೆ ಆಗಿಹುದು ಚಿಂದಿಬಟ್ಟೆ?

ಗಾಳಿಯಲಿ ಹಾರಿಹುದು ಕಪ್ಪು ಮಸಣದ ಬೂದಿ
ಹೋಳಿಯಾದವು ಎಲ್ಲ ಹುಣ್ಣಿಮೆಗಳು;
ಧೂಳಿಪಟವಾಗಿಹುದು ಬುದ್ಧಿ ಭೂಮ್ಯಾಕಾಶ-
ತೆರೆಯದಾಗಿದೆ ಕರುಣೆ - ಕಣ್ಣೆವೆಗಳು.

ಮುಖವಾಡವಿರದಂಥ ಮುಖವನರಸುತ್ತಿರುವೆ-
ಅದರ ಸಮ್ಮುಖದಲ್ಲಿ ದುಃಖ ಸುಖವೆ;
ಚೈತ್ರ ವೈಶಾಖಗಳ ಮೈತ್ರಿಯಲಿ ಚಿಗುರೊಡೆದು
ವರುಷದುದ್ದಕು ಹೀಗೆ ಹೆಜ್ಜೆಯಿಡುವೆ.

ಆ ಹಾದಿ, ಈ ಹಾದಿ ಹುಡುಕಿ ಬೇಸತ್ತಾಗ
ಯಾವ ಮಾಯದಿ ಬಂದೆ, ಓ ಯುಗಾದಿ?
ಊದುವ ಸನಾದಿಯಲಿ ಉತ್ಸವದ ದನಿಯಿಹುದು
ನಂಬಲೆ, ಮಂಗಲಕೆ ಇದು ಬುನಾದಿ?

ಸ್ವಾತಂತ್ರ್ಯ : ೪೦

೧

ಕಾಲೇಜು ಹುಡುಗ ನಾನಂದು, ಅನುಭವಿಸಿದ್ದೆ:
ಮಧ್ಯರಾತ್ರಿಗೆ ಮಿಂಚುಹೊಡೆದದ್ದು ಮೈತುಂಬ-
ಬಾನಿಗೇರಿದ ಮೂರು ಬಣ್ಣ ಬಾವುಟದಿಂದ
ಕನಸು - ಹೂಮಳೆ ಸುರಿದು ಒಂದು ಕ್ಷಣ ಮಿನುಗಿದ್ದೆ.
ಸಂಘರ್ಷ - ಶತಮಾನ: ಹಿಂಸೆಗೆದೆಗೊಟ್ಟಿರುವ
ತ್ಯಾಗದಾವಿರ್ಭಾವ; ತೇಲಿಬಂದಿತು ಹಂಸ.
ಬೆನ್ನು ಬಿದ್ದ ಕಪೋತ ಪಕ್ಷಿಗಿದೆ ತೊಡೆಮಾಂಸ.
ಬಾಳು ಹೋಳಾದಂತೆ ನುಂಗಿದ ನಂಜು-ನೋವ.
ಅರುವತ್ತು: ನನಗಂಥ ಅರಳು-ಮರಳೇನಿಲ್ಲ;
ನಾಲ್ವತ್ತು ವರುಷ ಬದುಕಿಸಿದ ಬಿಡುಗಡೆ - ಬಾಳು
ದೇಶಕ್ಕೆ ಇತಿಹಾಸ ಹಾಸಿಬೀಸಿದ ನೆರಳು-
ಎಡವಿ ಮುಗ್ಗರಿಸಿದರು ಕಣ್ಣು ಮಂಜಾಗಿಲ್ಲ.
ಶ್ವಾಸಕೋಶಕ್ಕಿಲ್ಲ ಧಕ್ಕೆ - ಸ್ಪರ್ಧೆಗಿಳಿಯದೆ
ಓಡಬಹುದಲ್ಲ ಹಾಗೇ, ತನ್ನ ಗುರಿಮರೆಯದೆ?

೨

ವಿರೋಧಾಭಾಸವೆ ಇದರ ಪ್ರಕೃತಿಗುಣವೇನೊ
ಇದ್ದುಬಿದ್ದದ್ದೆಲ್ಲ ಕೊಚ್ಚಿ ಹೋಗುವ ಹಾಗೆ
ಅತಿವೃಷ್ಟಿ, ಇಡಿವರುಷ ಒಂದು ಹನಿಯೂ ಬರದೆ
ನೆಲಬಿರಿದು ಬಾಯ್‌ಬಿಡುವ ಪರಿ. ಮುಂದೆ ಗತಿಯೇನೊ-
ಎಲ್ಲದಕು ಬರಗಾಲ. ಕಾಯಬೇಕೆಂತು ಸಮ-

ತೋಲ? ಅಣೆಕಟ್ಟಿನಲು ಸೋರಿಹೋಗುವದು ಹಣ
ಸೇತುವೆಯು ನಡುಗುವದು. ಜೇನುಹುಟ್ಟೋ? - ಮೇಣ.
(ಉತ್ಸವಮೂರ್ತಿ ಬಂಗಾರ ರಥದಲ್ಲಿ ಕ್ಷೇಮ.)
ಬಲೆಗೆ ಬೀಳಲು ಮೀನು; ತಿಮಿಂಗಿಲಕೊ ಸಾಗರ
ತಾನೇ ತಾನು. ಗಂಗೆಗೂ ಸ್ವಚ್ಛತಾಕ್ರಮ.
ನಮ್ಮೊಡಲಿಗಂತು ಅಂತರಗಂಗೆಯದೆ ವಿಕ್ರಮ.
ಬಿತ್ತಿದ್ದೇನೊ ಧರ್ಮ, ಬೆಳೆಯಿತೆಲ್ಲಿಂದ ಕ್ರೂರ
ಕರ್ಮ? ದುರ್ಧರ್ಷ ಭಯ. ಅತಿರೇಕಗಳ ನಡುವೆ
ಮುಗ್ಧ, ಸಂದಿಗ್ಧ ಜೀವಗಳನೆಲ್ಲಿ ಬಚ್ಚಿಡುವೆ?

೩

ಭಾಷಣದ ಕ್ರಿಯಾ ವಿಧಿ ಮುಗಿಸಿ, ಮೊಣಕಾಲೂರಿ
ಭರ್ರೆಂದು 'ಎಂಭತ್ತೇಳರುತ್ಸವ'ದ ಕಾರು
ಸುರಕ್ಷಿತ ದಾಟಿ, ಬಿಟ್ಟು ಸಮಾಧಾನದುಸಿರು -
ಕಟ್ಟಿರುವ ಭದ್ರಕಾವಲು: ಅದಕೆ ಆಭಾರಿ.
ಮಾತು ಮಾತಿನ ಹೊರೆಗೆ ಕುಸಿದಿರುವ ಸಾಮಾನ್ಯ:
ತಲೆ ಎತ್ತಿದರೆ :ಹಾರಾಡಿ ಬಣ್ಣದ ಬಲೂನು
ಈ ಮಣ್ಣ ದಿಣ್ಣೆಗಳಾಚೆ ಧವಳಗಿರಿ ಸಾನು.
ಬೆಳಗಿನಲಿ ಹೊಂಗನಸು ನೆನೆಸಿಕೊಂಡರೆ ಧನ್ಯ.
ಹೇಗಾದರೂ ಹುಡುಕಿ ರಂಗದ ಮೇಲೆ ತನ್ನಿ:
ತೆರೆಗುಂಟ ತೇಲಿಬಂದಿಹ ಕೊರಡುಗಳ ದೂಡಿ,
ಎದುರೀಜಿ, ಬರಡು ಬಾಳಿಗೆ ಭವಿತವ್ಯ ಮೂಡಿ-
ಸುವ ಧೀರ ಚೇತನರ, ದೂರವಾಗಲಿ ಸನ್ನಿ.
ಹೋರಾಟಕಣಿಗೊಳಿಪ ಸತ್ಪ್ರೋನ್ನತಿಯ ಕಾಲ
ಮತ್ತೆಬಂದಿದೆ; ಓದು ಮೂಲಗಾಂಧೀ ಪಾಠ.

ಬೆಳ್ಳಿದೀಪ: ಬಂಗಾರ ಬೆಳಕು

ಮಣ್ಣ ಹಣತೆಗೂ ಬೆಳ್ಳಿಯ ದೀಪಕು
ಬಂಗಾರದ ಬೆಳಕು,
ಎಣ್ಣೆ - ಬತ್ತಿಗಳ ನೇಹದಿ ಅರಳಿವೆ
ಎಲ್ಲ ಒಳ್ಳೆ ಬದುಕು.

ಇರುಳನು ಜಾಳಿಸಿ, ಬೆಳಗಿನ ಜಾವಕೆ
ಮೂಡಿ ಬೆಳ್ಳಿ ಚಿಕ್ಕೆ,
ಗೂಡು-ಮಾಡಗಳು ಮೂಡಣ ಕೆಂಪಿಗೆ
ತೆರೆದವಣ್ಣ ರೆಕ್ಕೆ.

ಗರ್ಭಗುಡಿಯ ಗೋಪುರದ ಕಳಸ
ಹಿಡಿದೆತ್ತಿ ಅಮೃತಕುಂಭ
ಮಬ್ಬು ಹರಿದು, ಹೆಬ್ಬಾಗಿಲು ತೆರೆಯಲು
ಅಬ್ಬ ಸೂರ್ಯಬಿಂಬ!

ಗಂಟು ಬಿಚ್ಚಿ ಹೊಸಬಾಳಗಂಟೆ
ನಾಲಗೆಯ ಪಡೆದ ಹಾಗೆ;
ಎಂಟು ದಿಕ್ಕಿಗೂ ನಾದ, ಮೋದ
ಉನ್ಮಾದ ಇಳಿವವರೆಗೆ.

ಮರ್ತ್ಯದಲ್ಲಿ ಆ ಕರ್ತೃ ಗದ್ದುಗೆಯು
ಕರ್ಮಕಿಲ್ಲ ಹೊರತು;
ಕ್ರಿಯಾಪದಕೆ ಬಾಗಿದರೆ ಬಾಗು
ಹಿರಿ ಕಿರಿದನೆಲ್ಲ ಮರೆತು.

ಶ್ರೀಗುರುವೆ ಸಿದ್ಧ, ಮಾನವನಿಗಿದ್ದ
ಅರಿವೆಲ್ಲ ಅರಗಿಸಿದ್ದ,
ಮರವೆಯೊಡನೆ ಚಿನ್ನಾಟವಾಡಿ
ತೆರವೆಲ್ಲ ತುಂಬಿಸಿದ್ದ.

ಎಷ್ಟೊ ಕ್ಷೇತ್ರ ಹರ ಹರಗಿಸಿದ್ದ
ಆ ಮೇಲೆ ಮರುಗದಂತೆ,
ಮುಗಿಲು ಕಣ್ಣು ತೆರೆದಾಗ ಬಿತ್ತಿ
ಹೊಡೆಬಿಚ್ಚಿ ನಿಲ್ಲುವಂತೆ.

ಒಳಗೆ ಇರುವೆ, ಹೊರಗೆಲ್ಲೊ ಕರೆವೆ
ಹುತ್ತಕ್ಕೆ ಹಾಲು ಸುರಿವೆ;
ನರನರಗಳೆಲ್ಲ ಹುರಿಗೊಳ್ಳುತಿರಲು
ನೆತ್ತರಿಗು ಮೀರಿ ಹರಿವೆ.

ನನ್ನೆಣಿಕೆ ಮೀರಿ ಸರಗುಣಿಕೆ ಹಾಕಿ
ಕರುಳಲ್ಲಿ ಜಗ್ಗುತಿರುವೆ,
ದುಡುಕಿದಂತೆ ಹುಡು ಹುಡುಕಿದಂತೆ
ಒಳಗಡಗಿ ಹಿಗ್ಗುತಿರುವೆ.

ಹೂಬಳ್ಳಿಯಲ್ಲಿ ಎಷ್ಟೊಂದು ಮಗ್ಗಿ
ಬೆರಳೆತ್ತಿ ಮುಗಿಲ ಕಡೆಗೆ, -
ಆ ಬಾನಿನಲ್ಲಿ ಅಡಗಿರುವ ಚಿಕ್ಕಿ
ನಿಬ್ಬೆರಗು ನೆಲದ ಸಿರಿಗೆ.

ಅದೇ ಸುಗ್ಗಿ, ಮತ್ತದೇ ಹುಗ್ಗಿ
ದಾಸೋಹ ನಡೆಯಲೆಂದೆ;
ನೆಲದ ಕಂಪು, ಅನುಭಾವದಿಂಪು
ಈ ಜೀವ ಪಡೆಯಲೆಂದೆ.

ಕನ್ನಡ ಜ್ಯೋತಿಯ ದೀಪಗಳು

ನೃಪತುಂಗ ಪ್ರೇರಣೆಯೆ ಆದ್ಯ ಗ್ರಂಥದ ಸ್ಮರಣೆ -
ಕಾವೇರಿಯಿಂದ ಗೋದಾವರಿಯವರೆಗೆ;
ನಾಡು-ನುಡಿ-ಗುಡಿ ತೇರು ಕವಿರಾಜ ಮಾರ್ಗದಲಿ
ಚೆಲುವ ಸುಭಟರ್ಕಳಿಗೆ ಅಭಿಮಾನದೊಸಗೆ.

ಕಾವ್ಯಧರ್ಮಕೆ ತುಡಿದು, ಮಾರ್ಗ-ದೇಸಿಯ ಬೆಸೆದು
ವಾಗ್ವಿಭವದುನ್ನತಿ ರಸಧ್ವನಿಯ ಮಿಡಿದು,
'ಒಂದೆ ಮಾನವ ಜಾತಿ'; ಸ್ತಂಭ ದೀಪಿಕೆಯಂತೆ
ಪ್ರಜ್ವಲಿಸೆ, ಕನ್ನಡಕ್ಕೊಡೆಯನದೆ ಪೆಂಪು.

ರನ್ನ, ಕೃತಿಯೂ ಘನ್ನ, ಅತ್ತಿಮಬ್ಬೆಯ ಚಿನ್ನ-
ವೀರ-ಕರುಣೆಯ ನಾಟ್ಯ ನಿರ್ಮಾಣ ತಾಣ;
ಗುಣಕೆ ಮಚ್ಚರವಿರದೆ, ಉತ್ಸಾಹ ಬಚ್ಚಿಡದೆ
ಸಾಹಸ ಮಹೋನ್ನತಿಯೆ ಪಂಚಪ್ರಾಣ.

ಅನುಭಾವದಾಳದಲಿ ಜ್ಞಾನಶಿಖರದ ಬಿಂಬ
ಮಾತು ಜ್ಯೋತಿರ್ಲಿಂಗ: ನಿಸ್ಸಂಗ ಸಂಗ;
ಮತಪಂಥ ಮೀರಿ ಗಗನಾಂತರದ ಪೀಠದಲಿ
ಶೂನ್ಯ ಗುರು ಅಲ್ಲಮನ ಗುಡುಗಿನ ತರಂಗ.

ಭಕ್ತಿ ಭಾಂಡಾರಿ, ನಿರ್ಭಯದ ನಿಷ್ಠುರ ಭೇರಿ-
ವಿನಯ ಮಾರ್ದವ, ಸಮತೆ - ಸಂಗಮದ ವೀಣೆ.
ಸಹಜ ನಿಜಗನ್ನಡದಿ ಅರಳಿ ವಚನೋದ್ಯಾನ
ಸಕಲಜೀವರ ಲೇಸು ಬಸವಣ್ಣನಾಣೆ.

ಅಳಿಬಳಗ, ಮಾಮರವೆ, ಕೋಕಿ, ಬೆಳುದಿಂಗಳೇ-
ಮಲ್ಲಿಕಾರ್ಜುನಗೊಲಿದ ಚೊಕ್ಕಮಾದೇವಿ;
ಮಧುರಭಕ್ತಿ -ವಿರಕ್ತಿ, ಭಾವಗೀತೆಯ ಚಿಲುಮೆ
ಸಾವಿಲ್ಲ, ಕೇಡಿಲ್ಲ ಸವಿಗನ್ನಡ ಧರಿತ್ರಿ.

ಸುರ ನರರ ತೊರೆದು, ಸರಳ ಸಾಮಾನ್ಯರಂಗಳಕೆ
ಉತ್ಸಾಹ, ಲಲಿತ, ಮಂದಾನಿಲದ ರಗಳೆ;
ಹೊಸ ದಿಕ್ಕಿನೆಡೆ ಕಾವ್ಯ ತುಂಗಭದ್ರೆಯ ಹೊನಲು,
ಶಿವಕವೀಂದ್ರಗೆ ಸಹಜ ಕ್ರಾಂತಿ ಕಹಳೆ.

ಧರ್ಮಬೋಧೆಯ ದಾಸ ಸೌಂದರ್ಯ ಪ್ರಜ್ಞೆಯಲಿ
ಕರಗಿ ಮಿರುಗಿದ ಯಶೋದುಂದುಭಿಯ ಚರಿತೆ;
ಜೀವನದದಮ್ಯತೆಗೆ, ವಿಧಿ ವಿಲಾಸದ ಪರಿಗೆ
ಜನ್ನ ದೃಷ್ಟಿಗೆ ಸೃಷ್ಟಿ ನೆಲದಾಳದೊರತೆ.

ಬಂಧ ಸುಂದರ, ದೃಷ್ಟಿ ಭಾಗವತ, ಜಟಿಲ ಜೀ-
ವನ, ಚಿತ್ಕಲಾಪದಿ ವೀರನಾರಾಯಣ;
ಕುಮಾರವ್ಯಾಸನ ದೇಸಿ, ಎರಡೂ ದಡವ ಸೂಸಿ
ಜನಮನವ ನಿಚ್ಚ ಹಸುರಾಗಿಸಿದ ವರುಣ.

ಪಲ್ಲವಿಯ ಫುಲ್ಲೆನಿಸಿ ಹಾಡು-ಹೆಜ್ಜೆಯ ಗೆಜ್ಜೆ
ಈಸಿ ಜೈಸುವ ಶ್ರದ್ಧೆ; ಉಳಿದ ಹಂಗೇಕೆ?
ತಂಬೂರಿ ನಾದ, ಚಿನ್ಮಯ ಧ್ಯಾನ ತನ್ಮಯದಿ
ಮೂರುತಿ ನಿಲಿಸಿ ಪುರಂದರ ದಿವ್ಯ ಶೃತಿಗೆ.

ನಿಜಗುಣಿ ನಿಜಾನಂದ ವೀಣೆ, ಕನ್ನಡ ಜಾಣೆ-
ಜ್ಞಾನ ಚಿಂತಾಮಣಿಯ ಲೋಕ ವಿಖ್ಯಾತೆ,

ಪರಮಾನುಭವದ ಪರಮಾರ್ಥ ಬೆಟ್ಟವೆ ಶಂಭು-
ಬೆಳಗಿತು ಪರಂಜ್ಯೋತಿ, ನಿತ್ಯ ನಿಶ್ಚಲತೆ.

ಧಾರಿಣಿಯು ಕುಲದೈವ, ಸ್ವಾತಂತ್ರ್ಯ ಬಿಡದಿರುವ
ಎಲ್ಲರನು ಹಿಡಿದು ಅಲ್ಲಾಡಿಸುವ ಧೈರ್ಯ,
ಮನೆಮನೆಗು ತ್ರಿಪದಿ : ದೀಪಾವಳಿಯು, ಸಿಡಿಮದ್ದು,
ಸಾರ್ವಕಾಲಿಕ ಮೌಲ್ಯ, ಸರ್ವಜ್ಞ ಆರ್ಯ.

ತ್ಯಾಗ-ಭೋಗದ ಮಹಾ ಸಾಂಗತ್ಯದೆರಕದಲಿ
ರತ್ನಮೌಕ್ತಿಕದಚ್ಚು ಭರತೇಶ ಮೂರ್ತಿ
ಅಧ್ಯಾತ್ಮ ರಸವಂತರಂಗ, ಬಹಿರಂಗದಲಿ
ಪೂರ್ಣ ಜೀವನದರ್ತಿ ರಸ ಚಕ್ರವರ್ತಿ.

ಚಿತ್ತ ಬತ್ತಿಯ ಹೊಸೆದು, ಜೀವದೆಣ್ಣೆಯನೆರೆದು
ಭಾವ ಪ್ರಕಾಶದಲಿ ಬದುಕಿಸುವ ಪ್ರೀತಿ;
ದೀಪಕ್ಕೆ ದೀಪ ಹೊತ್ತಿಸಿ ಕಾವ್ಯ ರೂಪಕದಿ
ಭವ್ಯ ಜೀವನದರ್ಶಿ ಕನ್ನಡ ಜ್ಯೋತಿ.

ಮುರಗೋಡದ ಮಹಾಂತರು

ಎಲ್ಲರನು ಬೆಳೆಸಿ ತಾನಿಹನು ಕೂಸಿನ ಹಾಗೆ -
ಮುಖವೆಲ್ಲ ನಸುನಗೆಯ ಬೆಳುದಿಂಗಳೆ;
ದೂರದ ದಿಗಂತದಲಿ ಹಾಲು-ಸಕ್ಕರೆ ಬೆಳಕು-
ಈ ಮಹಾಂತರ ಕರುಣೆ - ಕಿರಣಂಗಳೆ.

ಜನಸಮೂಹದ ನಡುವೆ ಸಾಂತ್ವನದ ತಿಳಿಗೊಳವು-
ದೀನದಲಿತರ ಬಳಿಗೆ ಹರಿವ ತೀರ್ಥ;
ಮುಟ್ಟಿದರೆ ಬಂಡೆಯೂ ಮೃದುವಾಗಿ ಬಿಟ್ಟೀತು-
ಹೃದಯ ತಟ್ಟುವದೊಂದೆ ಮಾತಿನರ್ಥ.

ನೂರು ಕಾಲಕು ನಿಜದ ಊರುಗೋಲನು ಹಿಡಿದು
ಭಾರವಾಗದ ಹಾಗೆ ಹೆಜ್ಜೆಯಿರಿಸಿ,
ಹೂವರಳಿದಂತೆ, ಮೆಲ್ಲಗೆ ಗಾಳಿ ಸುಳಿದಂತೆ
ನೊಂದ ಜೀವಕ್ಕೆ ನರುಗಂಪು ಸೂಸಿ,

ಮಾತಿಲ್ಲದೆಯೆ ಸಭೆಯ ಅಂತರಂಗವ ಹೊಕ್ಕು -
ಏಕಾಂತದಲಿ ಲೋಕ ಸಹಚಿಂತನ;
ಭಕ್ತಿಯಲಿ ಬಾಳಿ ಬದುಕಿದ ವಿರಕ್ತಿ, ಚಿಚ್ಛಕ್ತಿ
ಸೃಷ್ಟಿಕೌತುಕ, ದೃಷ್ಟಿಗಾಪ್ಯಾಯನ.

ಬೇವಿನಲೆಯನು ಸವಿದ ಬಾಲ್ಯ ವೈಶಾಲ್ಯವೇ
ಅರಬಾವಿಯನು ತುಂಬಿತುಳುಕಿದರಿವು,-

ಜನಮನದ ತೋಟಕ್ಕೆ ನೀರು - ನಂಬುಗೆ - ಬೇರು,
ದುಡಿಮೆ ದಾಸೋಹದಲಿ ಹಣ್ಣಾದವು.

ಶಿವನು ನಡೆಸಿದ ಹಾಗೆ ಸಾಗಿ ಮಾಗಿದ ಜೀವ-
ಅವನೆ ಆಗುವದೊಂದೆ ಉಳಿದ ಭಾವ.
ಶರಣರುಳಿವೆಯ ಕಡೆಯ ಬಾಗಿಲವ ತೆರೆದಿರಲು
ಮುರಗೋಡು ಕರೆದಿತ್ತು ಬೆಳಗುಜಾವ.

ನಿತ್ಯಪೂಜೆಗೆ ಅರಳಿನಿಂದಿರುವ ಹಗಲಿರುಳು -
ದರ್ಶನಕೆ ತೆರಪಿಲ್ಲ ವರುಷ ವರುಷ;
ಯಾವ ಜೀವಕು ನೋವು ತಾಗದಾನಂದವೇ-
ಮಣ್ಣೊಳಡಗಿದ ಲೋಹಕೆಲ್ಲ ಪರುಷ.

ಹನಿಗವನಗಳು

*

ಬೇಸಗೆಯಲ್ಲಿ ಬೇವಿನಮರದ ಕೆಳಗೆ
ಬೇರೆಲ್ಲಿಯೂ ದೊರೆಯದ ತಂಪು.
ಕಹಿಯ ಕಲ್ಪನೆಯೇ ಬಾರದ
ಹೂವಿನ ಗಮಗಮ ಕಂಪು.
ಎಲೆಗಳ ಚಿತ್ತಾರದ ಹಸುರು ಹಚ್ಚೆಯ ಹಿಂದೆ
ನೀಲಾಕಾಶದ ಬರಿಮೈಯೊಂದೆ.
ಸುಳಿಗಾಳಿ ಪಿಸುಗುಡುತ್ತಿದೆ - 'ಬಂದೆ, ಬಂದೆ'.
ಇಂಥ ನೆಮ್ಮದಿಯ ಹೊತ್ತಿನಲ್ಲಿ
ನಿಮ್ಮ ಕಣ್ಣು ತಂತಾನೆ ಮುಚ್ಚಿಕೊಳ್ಳುತ್ತಿರುವಾಗ
ಲೊಟ್ ಎಂದು ಮೈಮೇಲೆ ಬೀಳುತ್ತದೆ;
ಮೇಲೆ ನೋಡಿದರೆ
ಹಾಯಾಗಿ ರೆಕ್ಕೆ ಬಿಚ್ಚಿದ ಕಾಗೆ.

*

ಪೇಟೆಯಿಂದ ತಂದ ಬಗೆಬಗೆಯ ಆಟಿಗೆಗಳನ್ನು
'ನನಗೆ' 'ತನಗೆ' ಎಂದು ತೆಗೆದುಕೊಂಡು
ಮಕ್ಕಳು ಸಂತೋಷಗೊಂಡು
ಆಡಿ ಆಡಿ ಸಾಕಾದ ಮೇಲೆ
ತಾವೇ ತೆಗೆದಿಟ್ಟುಕೊಂಡವು.

ಸೊಗಸಾಗಿ ಪ್ಯಾಕು ಮಾಡಿದ
ರಟ್ಟಿನ ಖಾಲಿ ಪೆಟ್ಟಿಗೆಗಳನ್ನು

ಅಷ್ಟೇ ಜೋಪಾನವಾಗಿ
ನಾನು ತೆಗೆದಿಟ್ಟುಕೊಂಡೆ.

*

ಆರುತಿಂಗಳ ಜೈಲುವಾಸದ ಖೊಟ್ಟಿ
ಸರ್ಟಿಫಿಕೇಟಿನಿಂದ
ಪಿಂಚಣಿ ಪಡೆಯುತ್ತಿರುವ ಶೆಟ್ಟಿ-
ಸ್ವಾತಂತ್ರ್ಯ ಯೋಧ;
ಇಪ್ಪತ್ತೈದು ವರುಷಗಳಿಂದ ಸೆರೆಮನೆಯಲ್ಲಿರುವ
ನೆಲ್ಸನ್ ಮಂಡೇಲಾ ಬಿಡುಗಡೆಯಾದಲ್ಲಿ
ಎಷ್ಟು ಪಿಂಚಣಿ ಪಡೆಯಬಹುದು-
ಎಂದು ಲೆಕ್ಕಹಾಕತೊಡಗಿದ.

ಯುಗಾದಿ : ೧೯೮೮

ನೆಟ್ಟಗೆ ಧ್ವಜಸ್ತಂಭದಂತಿರುವ ಅಶೋಕ
ವೃಕ್ಷದ ಕೆಳಗೆ ಹಣ್ಣೆಲೆ ರಾಶಿ. ಹಗಲಿರುಳು
ಉದುರಿ, ಗಾಳಿಗೆ ಚದುರಿ; ಅತ್ತ ಹೊರಳಿದೆ ನೆರಳು.
ಮೈತುಂಬ ಎಣ್ಣೆ ಬಸಿಯುವ ಚಿಗುರು ಈ ತನಕ.
ಈಗ ವಿದ್ಯುತ್ತಂತಿ ದಾಟಿ, ಮೀಟಿ ಹೋಗುವ
ತವಕ. ಬೆಳಗಿನ ಮಂಜು ಕರಗಿ, ಎಳೆಬಿಸಿಲು ಹೊಳೆ-
ದು, ತೊಟ್ಟಿಕ್ಕಿ; ತುತ್ತತುದಿಗೆ ಕುಳಿತ ಹಕ್ಕಿ-ಜೊತೆ
ದನಿಯೆತ್ತಿದರೆ ಸಾಕು, ಅರ್ಥವಾಗುವ ಭಾವ.
ಅರ್ಥವಾಗದು ಪತ್ರಿಕೆಯ ಭಯೋತ್ಪಾದಕ
ಭಾಷೆ. ಏರಿ ಮನುಷ್ಯ ಆಕಾಶಕ್ಕೆ ತೆಕ್ಕೆ -
ಜಾರುವದೆ ನೆತ್ತರವ ಚೆಲ್ಲಿ ರಸಾತಳಕ್ಕೆ ?
ನೆಲದಲ್ಲಿ ನಡೆಗಲಿತಾಗ ಬದುಕು ಸಮತೂಕ.
ಸಂಜೆಗೆಂಪಿಗೆ ರೆಕ್ಕೆ ಬೀಸಿದರೆ ಬೆಳ್ಳಕ್ಕಿ -
ತಮಸ್ಸಿನಿಂದ ಹೊರಬರುವುವೊಂದೊಂದೆ ಚುಕ್ಕಿ.

ಹೆಬ್ಬಾವು

ಚಾಕು, ಚಮಚೆ, ಫೋರ್ಕು ಸಾಧನ ಬೇಕು ಕೆಲವರಿಗೆ,
ಕೈ-ಬೆರಳು ಸಾಕು ನಮ್ಮಂಥವರ ಆಹಾರ ಸೇವನೆಗೆ.

ಇತರ ಪ್ರಾಣಿಗಳಂತೆ ಯಾವ ನೆರವೂ ಇರದ ಹಾವು
ಕಚ್ಚಿ ತಿನ್ನದೆ ಇಡಿಯಾಗಿ ನುಂಗಬೇಕವು ತಮ್ಮ ಬೇಟೆ.
ಗಿಡದಿಂದ ಜೋತು, ಕೆಳಗೆ ಹುಲ್ಲಿನಲ್ಲಡಗುವದು ಹೆಬ್ಬಾವು.
ಇಲ್ಲವೆ ನದಿ, ಸರೋವರದ ನೀರಲ್ಲಿ ಮುಳುಗಿಸಿ ದೇಹ
ಮೂಗು ಕಣ್ಣುಗಳಷ್ಟೆ ಮೇಲಕ್ಕೆ ಚಾಚಿ ಕಾಯುವುದು,
(ಮೃತ್ಯುವಿಗೆಷ್ಟು ಅವಸರವೊ; ಅಷ್ಟೇ ತಾಳ್ಮೆಯೂ ಉಂಟು).

ಇಲಿಯೊ ಮೊಲವೊ - ಚಿಕ್ಕ ಪ್ರಾಣಿಯು ಸಾಕು ಅದರ ಮರಿಗೆ;
ಹೆಬ್ಬಾವಿಗೊ ಸಂಪುಷ್ಟ ಹಂದಿ, ಇಲ್ಲವೆ ಚಿಗರಿ ಈಡು ಗುರಿಗೆ.
ನೀರು ಕುಡಿಯಲು ಬಂದು ಮುಖವಿಡುವುದೊಂದೆ ತಡ,
ಇಲ್ಲ-ಆ ಗಿಡದಡಿಯಲ್ಲಿ ಸುಮ್ಮನೆ ಹಾದುಬಂದರೂ ಕೂಡ

ಮಿಂಚಿನಂತೆ ಗಬಕ್ಕನೆ ಹಿಡಿದುಬಿಡುವದು ಸಿಕ್ಕ ಭಾಗ.
ಪ್ರತಿಕ್ರಿಯೆ ಬರುವ ಮೊದಲೆ ಒತ್ತಿ ಸುತ್ತಿಕೊಳ್ಳುವದು ಬೇಗ.
ನಿಟ್ಟುಸಿರು ಬಿಟ್ಟಾಗ ಬೇಟೆ - ಬಿಡಲೆಬೇಕಲ್ಲ - ಇನ್ನಿಷ್ಟು ಬಿಗಿತ.
ಅವುಕಿ, ಉಸಿರ್ಗಟ್ಟಿಸಿ ನೋಡಿ ತಿಳಿಯುವದು ಎದೆಯ ಬಡಿತ.

ಸತ್ತದ್ದು ಖಾತ್ರಿಯಾಗುವವರೆಗೆ ಸಡಿಲಿಸದು ಕಚ್ಚಿದ ಹಿಡಿತ,
ಆಮೇಲೆ ಮೆಲ್ಲಗೆ ಬಿಚ್ಚಿ ಹುಡುಕಾಡುವದು ಅದರ ಮೂಗು ಮುಖ.
(ಹಸೀ ಧಡ್ಡ), ಸಿಕ್ಕೊಡನೆ ಆರಂಭ, ನುಂಗುವ ಸಮಾರಂಭ.
ನಮ್ಮ ದವಡೆಗೊಂದೇ ಎಲುವು, ತಲೆಬುರುಡೆಗಂಟಿ ಕೀಲು,
ಅದಕೊ ಮೇಲರ್ಧ, ಕೆಳಗರ್ಧ ದವಡೆ, ನಡುವೆ ಬೇಕಾದಷ್ಟು

ಹಿಗ್ಗಿಸಬಲ್ಲ ಸ್ನಾಯುಜಾಲ. ಎರಡು ಪ್ರತ್ಯೇಕ ಕೀಲು,
ಮೇಲ್ದವಡೆಯಲ್ಲಿ ನೂರಕ್ಕು ಹೆಚ್ಚು ತೆಳ್ಳಗಿನ ಹಲ್ಲು, ನಾಲ್ಕು ಸಾಲು.
ಬಾಗಿವೆ ಹಿಮ್ಮಗ್ಗಲು, ಹಾಗೆ ಎಳೆದುಕೊಳ್ಳುವದೊಳಗೆ ಸಲೀಸು;
ಗ್ಲೋವ್ ಹಾಕಿಕೊಳ್ಳುವುದಿಲ್ಲವೆ ಜಗ್ಗಿ ಕೈಗೆ? ಅದಕ್ಕೆ ಹೋಲಿಸು.
ಎಲ್ಲೂ ಧಕ್ಕೆಗೊಳಿಸದೆ ದವಡೆಯಿಂದಲೆ ನಡೆವುದೆಲ್ಲ ಪವಾಡ;
ಇಂಥ ದಕ್ಷತೆ ಪ್ರಾಣಿಲೋಕದಲಿ ಬೇರಿಲ್ಲ. ಜೀರ್ಣಶಕ್ತಿಯೊ ನಿಗೂಢ.

ಹಿಂಬದಿಯಿಂದ ಹೊರಬಿದ್ದಾಗ ಏನೂ ಬದಲಾಗದಿರುವ ವಸ್ತು,
ಕೂದಲೊಂದೆ, ಕೋಡು ಕೊಳಗಗಳು ಕೂಡ ಅದಕೆ ಅಸ್ತು.

ಹೊಟ್ಟೆಯಲಿ ಹೊಕ್ಕ ಇಂಥಾ ಮುದ್ದೆ ಹತ್ತು ದಿನದಲ್ಲಿ ಖಾಲಿ-
ತಿಂಗಳವರೆಗೂಸಾಕು; ಒಮ್ಮೊಮ್ಮೆ ಉಪವಾಸದ ಖಯಾಲಿ:

ಹತ್ತು ತಿಂಗಳು, ಎರಡು ವರ್ಷಗಳ ದಾಖಲೆ ಕೂಡ ಉಂಟಂತೆ,
ಆಮೇಲೆ ಮತ್ತೆ ಆಹಾರ ನುಂಗಿ ಯಥಾಪ್ರಕಾರ ನಿಶ್ಚಿಂತೆ.

ಇಷ್ಟೆಲ್ಲ ಕಷ್ಟಪಡದೆ ನಿರಾಯಾಸ ನುಂಗಿಹಾಕುವ ಪ್ರಾಣಿ ಮನುಷ್ಯ-
ದಕ್ಕಿಸಿಕೊಂಡ ಮೇಲೆ, ದೇಶ-ಜನತೆಗಿದ್ದೇ ಇದೆ ಉಜ್ವಲ ಭವಿಷ್ಯ.

ಕೀಟಕ

ಕೀಟಗಳೆಂದರೆ ಎಲ್ಲಿಲ್ಲದ ಕುತೂಹಲ ನನಗೆ;
ಅವುಗಳ ಬಗೆಬಗೆಯ ಮಾಟ, ಆಟ, ಬೇಟ ಕೂಡ.
ಅಡ್ಡಾದಿಡ್ಡಿ ಕಡ್ಡಿಯಂತಹ ಕಾಲು, ವಿಚಿತ್ರ ನಡಿಗೆ ನೋಡ.
ಒಡೆದು ಕಾಣುವ ಶರೀರದ ಖಂಡ-ತುಂಡದ ತುದಿಗೆ
ಮೂಸಿ, ಮೆಲ್ಲನಲುಗುವ ಮೀಸೆ, ಅವಲೋಕಿಸುವ
ಗುಂಡು ಗಾಜಿನಂತಹ ಕಣ್ಣು, ವಿವಿಧ ಮೈಬಣ್ಣಗಳು.

ಉಳ್ಳಿಪರೆಯಂಥ ರೆಕ್ಕೆಗಳಲ್ಲಿ ಒಳ್ಳೊಳ್ಳೆ ನಕ್ಷೆ
'ಜಿರ್‌ಜಿರ್' ಜಿಗಿದು ಹಾರುತ್ತ, ನಮ್ಮ ಸುತ್ತಮುತ್ತ
ತಮ್ಮ ಮಿತಿಯಲ್ಲೆ ನಡೆಸಿರುತ್ತವೆ ಸೃಷ್ಟಿ-ಸಮೀಕ್ಷೆ.
ಮಾನವನೊಂದಿಗೇ ಹುಟ್ಟಿ, ಬೆನ್ನಟ್ಟಿ ಬಂದಿರಬಹುದು;
ತಮ್ಮ ಲೀಲೆಗೆ, ಹಾರುವ ಕಲೆಗೆ, ಒಂದಿಷ್ಟು ಕೀಟಲೆಗೆ
ಪರಸ್ಪರ ದಾಳಿ-ಧೂಳಿ, ಆಮೇಲೆ ತಂತಮ್ಮ ನೆಲೆಗೆ.

ಬೇರು ಕಡಿದು, ಕಾಂಡ ಕೊರೆದು, ಎಲೆತಿಂದು, ಕಾಳು ಜೊಳ್ಳಾಗಿಸಿ-
ಕಚ್ಚಿ, ಚುಚ್ಚಿ ರಕ್ತದ ರುಚಿ ನೋಡಿ ಹಾಡಿಕೊಂಡಿವೆ ಕೆಲವು.
ಹೊಲಸಿನಲಿ ಹುಲುಸಾಗಿ ಸಿಕ್ಕತ್ತ ಹಾರುವ ನೊಣ-
ಜಾಡಿಸುವದೆ ನಮಗೆ ಉದ್ಯೋಗ - ಹರಡುತ್ತ ರೋಗ.

ವೈವಿಧ್ಯದಲ್ಲಿ ಮಾನವನಿಗಿಂತ ಮಿಗಿಲು ಕೀಟ ಪ್ರಪಂಚ;
ದಿಗಿಲು ಹುಟ್ಟಿಸಬಹುದು ಅಗಾಧ ಸಂತಾನ ಶಕ್ತಿ.
ಬೆರಳು ಕಚ್ಚುವ ಹಾಗೆ ಬೆಳವಣಿಗೆ ಇಲ್ಲವೆಂದಲ್ಲ
ಹಿತಶತ್ರುಗಳು, ಅಥವ ನಿರುಪದ್ರವಿ ಕ್ಷುದ್ರ ಜೀವಿಗಳು.
ಬಣ್ಣಬಣ್ಣದ ಚಿಟ್ಟೆ, ಹೂವಿನ ತಟ್ಟೆ, ಗಾಳಿಯಲಿ ಹಾರಬಿಟ್ಟು,

ಜೇನ್ನೊಣದ ಹಿಂಡು ಬಂಡುಂಡು ಕಟ್ಟಿದ ಹುಟ್ಟು
ಎಟುಕದಂತಿದೆ ಇಂದಿಗೂ ಆ ಕಲೆಯ ಗುಟ್ಟು.

ಪಿಡುಗು ಕೀಟಗಳ ಹುಟ್ಟಡಗಿಸಲು ಹುಡುಕಿದೌಷಧ
ಕುಡಿದು ಬದುಕಿ ಬಲಗೊಂಡ ಮಾಯಕ
ಹೊಸ ಬಗೆಯ ರಾಸಾಯನಿಕ, ಅವಕೆ ಕುಡಿದಂತೆ ಪಾನಕ
ಉಳಿದೆಡೆಗಳಲ್ಲಿ ಪಸರಿಸಿಬಿಟ್ಟ ವಿಷಧಾರೆ.
ಸೋಲು-ಗೆಲುವಿನ ಮಾನವ ಪ್ರಯೋಗಶಾಲೆ.

ಶೋಧನೆ, ಶೋಧನೆ, ಇನ್ನೂ ಶೋಧನೆ-
ನಿಸರ್ಗದ ಮಡಿಲಿಗೇ ಹಿಂದಿರುಗಿದ್ದಾನೆ ಕೊನೆಗೆ,
ಪರಿಸರವ, ಜೀವಜಾಲವ ಏರುಪೇರಾಗಿಸದ ಕ್ರಮಕ್ಕೆ.

ವಂಶ ನಿರ್ವಂಶಗೊಳಿಸುವ ಸಾಹಸ ವ್ಯರ್ಥವೆನಿಸಿ
ಕೀಟಗಳಿಂದಲೇ ಕೀಟಗಳ ನಾಶ: ಜೈವಿಕ ನಿಯಂತ್ರಣಕ್ಕೆ.

ನಡೆದಿಲ್ಲವೇ ಮತ್ತೆ ಮನುಷ್ಯನಿಂದಲೇ ಮನುಷ್ಯನ ಕೊಲೆ?
ಜೀವಕೆಲ್ಲಿದೆ ಬೆಲೆ? ನನ್ನೆದುರು ಉರಿವ ಮೇಣಬತ್ತಿಗೆ
ರೆಕ್ಕೆಬಡಿದು ಸುಟ್ಟುಕೊಂಡಿದೆ ಪತಂಗ, ಸುತ್ತೆಲ್ಲ ಕತ್ತಲೆ.

ಈ ವರ್ಷ ಕಂಡ ಮಳೆಗಾಲ

೧

ಈಟಿದ್ದದ್ದು ನೋಡ ನೋಡುತ್ತ ಇಷ್ಟಗಲ ಹರಡಿ,
ಉಬ್ಬಿ, ಕೊಬ್ಬಿ, ತೂರಾಡಿ, 'ಏನು ಮಾಡಲಿ'
ಎಂದು ಹೊಯ್ದಾಡುತ್ತ ಮುಂಗಾರ ಕಾರ್ಮೋಡ
ಆಕಾಶದಲ್ಲಿ ತೆಕಿಮುಕ್ಕಿ ಬಿದ್ದಾಗ-
ಬಯಲು ತುಂಬೆಲ್ಲ ಧಗಧಗಿ, ನೆಲದಲ್ಲಿ ಒಂಥರಾ ಹುಕಿ.
ಪಳ್ಳನೆ ಮಿಂಚಿ, ದಿಕ್ಕೆಲ್ಲ ಗುಡುಗಿದ ಪ್ರತಿಧ್ವನಿಗೆ
ಒಳಗೊಳಗೆ ಸಣ್ಣಗೆ ನಡುಗಿ, ಭೂಮಿ ಬೆವರೊಡೆದು
ಸಂತೂರಿನ ನೂರು ತಂತಿಗಳ ಝಣತ್ಕಾರ
ತೋರಮುತ್ತಿನ ಮಳೆ; ಮೇಘ ಮಲ್ಹಾರ.

ನಿಂತಲ್ಲೆ ನೂರುತರ ಮಣಿದು, ಕುಣಿದು ಕುಪ್ಪಳಿಸಿದವು
ಮರ- (ಕೆಲವು ಭವ್ಯವಾಗಿಯೆ ನೆಲಕ್ಕೊರಗಿದವು.)
ಬೇರಿಂದ ತುದಿವರೆಗು ಹೀರಿ, ಹೊಚ್ಚ ಹೊಸತಾಗಿ,
ಬಿರುಗಾಳಿ ಬೀಸಿತು ಮತ್ತೆ ಮೋಡಗಳ ದೂಡಿ
ಆಕಾಶದಂಚಿಗೆ ಒಯ್ದು ನಿಲ್ಲಿಸಿತು: ಬೇರಡೆಯ
ನೆಲವನಾಕ್ರಮಿಸಿಕೊಳ್ಳಲು ಸಜ್ಜುಗೊಳಿಸಿ.

(ಒಮ್ಮೊಮ್ಮೆ ರಾತ್ರಿ ಸರುವೊತ್ತಿನಲಿ ಸಪ್ಪಳಿಲ್ಲದೆ
ಬಂದು
ಕಿಡಕಿ ಗಾಜಿನಲಿ ಮಿಂಚಿ, ಹೊಳೆಹೊಳೆವ ಹನಿ
ಬಾ (ಬ್ಯಾ) ಲೆ, ಜುಳುಜುಳು ಹರಿವ ನಾದ,
ಯಾವ ನಾಟಕದ ರಂಗ ತಾಲೀಮೊ ಅಲ್ಲಿ ಮೇಲೆ!)

೨

ಎಷ್ಟು ವರ್ಷಗಳಾದುವೊ ಇಂಥ ಮಳೆಗಾಲ ಕಂಡು-
ಬಡಕಲು ದನವ ಹೊಡಕೊಂಡು ಮಕ್ಕಳು ಮರಿ ಸಹಿತ
ಗುಳೇ ಕಟ್ಟಿಕೊಂಡು ಹೋದವರು ಮರಳಿ ಬಂದಾರು
ಗುಡಿಸಲಿಗೆ, ಗೇಣು ಹೊಲ ಗದ್ದೆಗೆ, ಹಿಡಿ ಮುದ್ದೆಗೆ.

ಒಮ್ಮೆಯಾದರು ತುಂಬಿ ತುಳುಕಿದವಲ್ಲ- ನೀರಿನಂತೆ
ಹಣ ಚೆಲ್ಲಿ ಕಟ್ಟಿದಣೆಕಟ್ಟು ಹರಿದು ಹರಿಸಿದವಲ್ಲ
ಎರಡೂ ದಡವ ಸೂಸಿ ಜೀವನದಿ, ಜನುಮ ಜನುಮದ
ರೇವೆತಂದು ಬಿಟ್ಟು. ಈಗಲೇ ಬರುವ ಸುಗ್ಗಿಯ ನೆನೆದು
ಹುಗ್ಗಿಯುಂಡಂತಾಯ್ತು; ಮುಗ್ಗರಿಸದಿರಲಿ ಕನಸುಗಳ
ರಾಶಿ ಹೇರಿ ಹೂಡಿರುವ ಕೊಲ್ಲಾರಿ ಬಂಡಿ.
(ರಗ್ಗಿನ ಮುಸುಕಿನಲ್ಲೂ ನುಗ್ಗಿ ಬಂದಿದೆ ಥಂಡಿ).

ನೌಕರಿ ಜನಕ್ಕೆ ಕೊಡೆ, ರೇನ್‌ಕೋಟು ಹುಡುಕಿ ಝಾಡಿಸಿ,
ಹಿಡಿದು ಓಡುವದೊಂದೆ ಕೆಲಸ. ಸುಮ್ಮನೆಲ್ಲಿ ಬರುತ್ತಾರೆ
ಮಕ್ಕಳು ಶಾಲೆಯಿಂದ? ಬಸ್ಸು ತಪ್ಪಿದ ನೆವಕೆ ತೊಯ್ಸಿಸಿಕೊಂಡು
ಮತ್ತೆ ಬಯ್ಸಿಸಿಕೊಂಡು, ಪುಸ್ತಕದ ಹೊರೆಯನಿಳಿಸುತ್ತಾರೆ.
ಸೋರಿದಲ್ಲೆಲ್ಲ ಮಾಸ್ತರು ಹರಕು ಗೋಣಿಯ ತಟ್ಟು ಹಾಕಿ
ಹಾಜರಿ ಬುಕ್ಕು ಒಳಗಿಟ್ಟು 'ಸೋರುತಿಹುದು ಮನೆಯ ಮಾಳಿಗಿ'
ಎಂದು, ವಿಶ್ವ ಕನ್ನಡ ಮೇಳಕ್ಕೆ ಕೇಳದಂತೆ ಹಾಡಿಕೊಳ್ಳುತ್ತಾರೆ.

ಜಡಿಮಳೆಯಲ್ಲಿ ಕೆಲಸದವಳೆಲ್ಲಿ ಕೈಕೊಡುತ್ತಾಳೊ-
ಕಸ, ಮುಸುರೆ, ಒಗ್ಯಾಣ ಹಾಗೇ ಬಿದ್ದಿವೆ. ಬಂದಾನೊ
ಬಾರನೊ 'ನಂದಿನಿ'ಯ ಹಾಲಿನವ. ಬೂಟುಗಾಲಿನ ರಾಡಿ
ಒಳಗೆ ತರಬೇಡಿ ಮಾರಾಯರೆ... ತಡವಾದರೂ ಚಿಂತೆಯಿಲ್ಲ
ಬಂದೆ ಬರುತ್ತದೆ ಪೇಪರು. ತೊಯ್ದರೂ ಆರುವದಿಲ್ಲ

ಬಿಸಿಬಿಸಿ ಸುದ್ದಿ: ನೇರ ಗುಂಡಿಟ್ಟು ಕೊಲೆ, ಹಾಡೇ ಹಗಲು ದರೋಡೆ:
ಕಾರು -ಲಾರಿಯ ಢಿಕ್ಕಿ (ಎಲಾ, ಎಲ್ಲ ಮಾಮೂಲಿ) ತುಂಬ
ಬಹುದೆ ಈ ವರುಷ ಲಿಂಗನಮಕ್ಕಿ? ಎಲ್ಲಿಗೆ ಬಂತು
ಭಿನ್ನಮತೀಯರ ದೌಡು? - ದಿಲ್ಲಿಯವರೆಗೆ - ಹುಚ್ಚು.
ಮಹಮ್ಮದನ ದರಬಾರು : ಯಾವ ಭರವಸೆ ಹೊತ್ತು, ಮತ್ತೆ
ಕೈಬೀಸಿ ಬಂದರೊ ಕಾಣೆ - ('ನಿನ್ನನೈವರ ನೋಯಿಸೆನು
ರಾಜೀವಸಖನಾಣೆ') ಮೋಡದ ಮರೆಯಿಂದ ಹೇಗೆ
'ಟೀ ವಿ'ಯಲ್ಲಿ ಮುಗುಳ್ನಗುತ್ತಾನೆ ನೋಡು ಜಾಣೆ.

೩

ಎಂದಿನಂತಲ್ಲ ಬಿಡಿ, ಈ ವರ್ಷ ಕಂಡ ಮಳೆಗಾಲ -
(ಜೇಲಿನೊಳಗಿಂದ ಆಸ್ಪತ್ರೆಯೊಳಗೆ ನೆಲ್ಸನ್ ಮಂಡೇಲ)
ವರುಷ ವರುಷಕ್ಕೆ ಪಾತ್ರ ಬದಲಾಯಿಸುವ ನದಿಗಳು,
ಬುಡಮೇಲು ನಾಡ ದೋಣಿಗಳು, ಬೋಗಿ ಕಳಚುವ ರೈಲು
ಇಟ್ಟಲ್ಲೆ ಮರೆಯಾಗಿ ಬಿಡುವ ರಹಸ್ಯಗಳ ಫೈಲು.
ಉರಿದುರಿದು ಚೂರು ಚೂರಾಗಿ ಬಿತ್ತು ಅಲ್ಲಿ ವಿಮಾನ,
ಇಲ್ಲಿ ಉಕ್ಕಿನ ಕವಚದಲ್ಲಿ ಸದಾ ಜಪ್ಪಿಸಿಕೊಂಡ ಮಾನ.
ಸುತ್ತೆಲ್ಲ ನೀರು ಭೋರ್ಗರೆದು, ನಡುವೆ ಭೂಕಂಪ -
ತೋರಿಸಬೇಕು ಯಾರು ಯಾರಿಗೆ ತಮ್ಮ ಅನುಕಂಪ?

ಹವಾ ಬಹಳ ಕೆಟ್ಟಿದೆ; ರಸ್ತೆಯ ತುಂಬ ತಗ್ಗು, ರಾಡಿ-
ನೋಡಿ ಹೆಜ್ಜೆಯಡಿ. ನೀರು ಕಾಯಿಸಿ ಕುಡಿವಿರಲ್ಲ?
ಭಾವಾತಿಸಾರಕ್ಕೆ ಈಡಾಗದಿರಿ. ಇಷ್ಟೆಲ್ಲ ಗದ್ದಲದಲ್ಲಿ
ವಯಸ್ಸಾದದ್ದನ್ನೆ ಮರೆತಿದ್ದೀರಿ ಅಲ್ಲ? ಅದೂ ಒಳ್ಳೆಯದೆ.

ತುಸು ಬಿಸಿಲು ಬಿದ್ದರೆ ಸಾಕು, ಎಲ್ಲೆಡೆಗು ಹಚ್ಚನೆ ಹುಲ್ಲು,
ಹೂಗಳಿಗೆ ಹೊಸ ಬಣ್ಣ: ನೋಡಿ ಹೇಗಿದೆ ಮುಗಿಲು-
ಒಂದಲ್ಲ. ಎರಡು ಕಾಮನ ಬಿಲ್ಲು.

ಸೂರ್ಯನಿದ್ದಾನೆ ಬೆನ್ನಹಿಂದೆ

ಸೂರ್ಯನಿದ್ದಾನೆ ಬೆನ್ನ ಹಿಂದೆ-
ಅಂತೆಯೇ ದುಡುದುಡು ಹೆಜ್ಜೆಯಿಟ್ಟು ಮುಂದೆ ಸಾಗುತ್ತೀರಿ
ನಿಮ್ಮ ನೆರಳನ್ನೇ ತುಳಿಯುತ್ತ.
ನೆತ್ತಿಯ ಮೇಲೆ ಬಂದಾಗ ಸ್ವಲ್ಪ ಸುಸ್ತಾಗಿ
ತಲೆಯ ಮೇಲೆ ಕೈಹೊತ್ತು ಕೂಡುತ್ತೀರಿ-
ನೆರಳು ಹುಡುಕುತ್ತ.

ನಿಮ್ಮ ಕಣ್ಣೆದುರಿಗೇ ಇಳಿಯುತ್ತ ಬರುತ್ತಾನೆ
ನೆರಳು ಹಿಂದೆ ಸರಿದು, ದಾರಿ ಮಾಡಿಕೊಡುತ್ತದೆ.
ಹೊರಳಿ ಹೊರಳಿ ನೋಡುತ್ತ ಮತ್ತೆ ಹೊರಡುತ್ತೀರಿ.

ಮೋಡದ ಮರೆಗಿದ್ದರೂ ಕೆಳಗೆ ತಗ್ಗುದಿನ್ನೆಗಳಲ್ಲಿ
ಹೊಲಗದ್ದೆಗಳಲ್ಲಿ ಹಸುರು ಬೆಳಕಾಗಿ ಹರಡಿಕೊಳ್ಳುತ್ತಾನೆ.
ತುಂಬಿನಿಂತ ಕೆರೆಗಳಲ್ಲಿ, ತುಳುಕಿ ಹರಿವ ಹೊಳೆಗಳಲ್ಲಿ
ಪ್ರೀತಿಯ ಪ್ರತಿಬಿಂಬಕ್ಕೆ ಚುಂಬಿಸುತ್ತಾನೆ.
ಮುಳುಗುವ ಮುನ್ನ ಮುಗಿಲಿನ ತುಂಬ
ಕೆಂಪು ಹೂವಿನ ಕುಡಿಕೆಗಳನ್ನು ಹಾರಿಸಿ
ಸುರುಸುರು ಬತ್ತಿ ಹಚ್ಚಿ,
ಸದ್ದಿಲ್ಲದೆ ಸರಿದು ಹೋಗುತ್ತಾನೆ,
ನಿಮ್ಮ ನೆರಳನ್ನು ಜೊತೆಗೆ ಒಯ್ದು ಬಿಡುತ್ತಾನೆ.

ಇದ್ದವರು ವಿದ್ಯುದ್ದೀಪ ಹಚ್ಚಿ, ಗ್ಯಾಸಿನ ಮೇಲೆ ಕುಕ್ಕರ್ ಇಟ್ಟು
ಟಿ.ವಿ. ಮುಂದೆ ಠೀವಿಯಿಂದ ಕುಳಿತುಕೊಳ್ಳುತ್ತಾರೆ.
ಇಲ್ಲದವರು ಬುಡ್ಡಿಗೆ ಕಡ್ಡೀ ಕೊರೆದು, ಒಲೆಗೆ ಉರಿ ಹಚ್ಚಿ

ಗೋಡೆಯ ಮೇಲೆ ನೆರಳು ನೋಡುತ್ತಾರೆ.
ಮತ್ತೆ ಬರುತ್ತಾನೆಂಬ ಭರವಸೆಯಲ್ಲಿ
ನಿದ್ದೆಯೊಡನೆ ಮುದ್ದಾಡುತ್ತ, ಬಾರದಿದ್ದರೆ
ಒದ್ದಾಡುತ್ತ, ಗೂರ್ಖಾನ ಬಡಿಗೆಯ ಸಪ್ಪಳಕ್ಕೆ
ಧೈರ್ಯಗೊಂಡು ಮಗ್ಗುಲಿಗೆ ಹೊರಳುತ್ತಾರೆ.

ಇರುಳಿನ ಚಳಿಯಲ್ಲಿ ಸೂರ್ಯನ ನೆನಪು
ಎಷ್ಟೊಂದು ಸುಖ ಕೊಡುತ್ತದಲ್ಲವೆ?
ಸಂದಿಗೊಂದಿಗಳಲ್ಲಿ ಬೆಳಕು ತೂರಿ ಶಾಖ(ಕ್) ಕೊಟ್ಟು
ಹುಟ್ಟು - ಸಾವು ಕೆಂಪಾಗುತ್ತವೆ.
ನೆಲದ ಹಸಿರನ್ನು ಕಂಡು ಹಿಗ್ಗಿ, ಆಕಾಶದ ನೀಲಿ
ಕಡಲಿಗೆ ಕನ್ನಡಿ ಹಿಡಿದಾಗ, ಅದರ ಒಡಲಿನಲ್ಲಿ
ಸೂರ್ಯ ವಿಶ್ರಾಂತಿ ಪಡೆಯುತ್ತಾನೆ.

ಗೋಸುಂಬೆಗಳು

ಗಿಡಗಂಟಿ ಬೇಲಿಗಳಲ್ಲಿ ಸರಕ್ಕನೋಡುವ ಓತಿಕಾಟ:
ರಕ್ತಗೆಂಪಿನ ಕೊರಳನುಬ್ಬಿಸಿ ಬಿಡುವ ದುರು ದುರು ನೋಟ.
(ಮನುಷ್ಯನ ರಕ್ತ ಹೀರುವದೆಂಬ ಮಾತು ದಿಟವಲ್ಲವಂತೆ.)
ಬೆದೆಗಾಲದಲ್ಲಿ ಗಂಡಿಗೆ ವಿಲಕ್ಷಣ ಬಣ್ಣ :
ತುದಿಗಾಲು ಕಪ್ಪು, ಮೇಲ್ಬದಿಗೆ ಎದ್ದು ಬಡಿಯುವ ಕೆಂಪು, ಹಳದಿ.
ಗರಗಸದಂತೆ ಬೆನ್ನು, ತಲೆಯ ಮೇಲೆದ್ದ ಶಿಖೆ.
ಅಂದವಿಲ್ಲದ ತಮ್ಮ ಹೆಣ್ಣುಗಳ ಮುಂದೆ ಒಂದಿಷ್ಟು
ದೊಂಬರಾಟವನಾಡಿ ಮೆರೆಯುವ ಹುಂಬತನ :
ಇರಬಹುದು ಉಳಿದ ಸ್ಪರ್ಧಿಗಳಿಗೂ ಒಂದು ಎಚ್ಚರಿಕೆ.

ನಿಜವಾದ ಗೋಸುಂಬೆಗಳೆ ಇವು?- ಇರಲಿಕ್ಕಿಲ್ಲ, ಅವು
ಸಿಕ್ಕ ಸಿಕ್ಕಾಗ ಕಣ್ಣಿಗೆ ಬೀಳುವ ಜಾತಿಯಲ್ಲ.
ಹುಲುಸಾದ ತೋಟ, ತೋಪುಗಳಲ್ಲಿ ವಾಸ.
ತಪ್ಪಿ ರಸ್ತೆಗಿಳಿದಾಗ ಮಾತ್ರ ನಿಸ್ಸಹಾಕವಾಗಿ ಕಂಡಾವು.
ಒಮ್ಮೆಲೆ ಓಡಲಾರದೆ, ಚಲಿಸಲಾರದೆ ಯಾವ ಬದಿಗೂ
ನಿಧಾನ ಹೆಜ್ಜೆಯಿಟ್ಟು, ಹಿಂಬದಿಗೆ ಹೊರಳಿ ನೋಡುತ್ತ
ಹೊರಟಾಗ ಸಿಕ್ಕಿಬಿಳುತ್ತವೆ ಅಕಸ್ಮಾತ್ತಾಗಿ.
ಒಯ್ದು ಗಿಡದಲ್ಲಿ ಬಿಟ್ಟರೆ, ಅರೆಕ್ಷಣದಲ್ಲಿ
ತೀಕ್ಷ್ಣ ಕಣ್ಣಿಗೂ ಮಣ್ಣೆರಚಿ ಮಾಯ.
ಬಣ್ಣ ಬದಲಾಯಿಸಲು ಪರದೆಯೂ ಬೇಕಿಲ್ಲ.
ದೇಹ ಚಪ್ಪಟೆಗೊಳಿಸಿ, ಎಲೆ ತೊಗಟೆ-
ಗಂಟಿ ಬಿಡುತ್ತವೆ ಕಂಡರೂ ಕಾಣದಂತೆ.
ಸಾಮಾನ್ಯವಾಗಿ ಎಲ್ಲ ಪ್ರಾಣಿಗಳ ಕಣ್ಣಿನ ದೃಷ್ಟಿ

ನಮ್ಮ ಹಾಗೇ. ಒಂದೆ ವೇಳೆಗೆ, ಒಂದೆ ದಿಕ್ಕಿಗೆ ನೋಟ
ಹರಿಸುವ ಧಾಟಿ. ಗೋಸುಂಬೆ ಹಾಗಲ್ಲ.
ನಿಮ್ಮ ಮೇಲೊಂದು ಕಣ್ಣು. ತಿರುಗಣೆಯಂತೆ ಹೊರಳಿ
ಇನ್ನೊಂದು ಹಿಂಬದಿಗೆ ನೋಟ, ನೊಣವೊ, ಕೀಟವೊ
ಹಾರಾಡುತ್ತ ಬಂದು ಕುಳಿತರೆ ಸಮೀಪ-
ಎರಡೂ ಕಣ್ಣು ಗರಕ್ಕನೆ ತಿರುಗಿ, ದುರ್ಬೀನು ಹಚ್ಚಿ
ನೋಡಿದ ಹಾಗೆ ಅಂತರವಳೆದು, ದೇಹವಷ್ಟೇ
ಉದ್ದವಾಗಿರುವ ನಾಲಗೆ ಚಾಚಿ ಬಾಚುವದು.
ಬಣ್ಣ ಬದಲಿಸುವ ಹಾಗೇ ಇದು ಕೂಡ ಅದ್ವಿತೀಯ.
ಮೂರನೆಯದೂ ಒಂದಿದೆ ಮುಖ್ಯ ವೈಶಿಷ್ಟ್ಯ:
ದೇಹದ ಕೆಳಗೇ ಬಾಲ ಸುರುಳಿಸುತ್ತಿ, ಕುಳಿತ
ಟೊಂಗೆಗೆ ಬಿಗಿದು, ತನ್ನ ಸ್ಥಾನಕ್ಕೆ ಚ್ಯುತಿ ಬರದಂತೆ ಭದ್ರ.

ಇವು ಅಂಥ ವಿಷಕಾರಿ ಪ್ರಾಣಿಗಳಲ್ಲ-
ಎಂದು ಒಂದು ಪಕ್ಷ ಹೇಳುವದುಂಟು.
ಗೊತ್ತಿರಬೇಕಲ್ಲ ನಿಮಗೂ
ವೇದಾಂತಕ್ಕೂ ವ್ಯವಹಾರಕ್ಕೂ ಸಾಕಷ್ಟು ಅಂತರವುಂಟು.
ಒಂದು ವೇಳೆ ಇವನ್ನೆಲ್ಲ ಹುಡುಕಿ ಹಿಡಿದು
ಬಂಧನದಲ್ಲಿಟ್ಟರೂ ಹೊಟ್ಟೆಗೆ ಹಾಕುವದು ಕಷ್ಟ.
ಏಕೆನ್ನುವಿರಾ? ಇವುಗಳ ಆಹಾರ
ಜೀವಂತವಾಗಿ ಹಾರಾಡುತ್ತಿರುವ ನಿಷ್ಪಾಪಿ ಕ್ರಿಮಿ-ಕೀಟ.

ಶ್ರಾವಣದ ಒಂದು ಸಂಜೆ

ಬಾನೆಲ್ಲ ಮೋಡದ ಮುಸುಕು, ಮಬ್ಬುಗತ್ತಲು ಕೋಣೆ.
ಸಣ್ಣಗೆ ಹಿಡಿದು ಬಿಟ್ಟ ತಂತು ತುಂತುರು ಮಳೆ.
ದುರಸ್ತಿ ಕಾಣದ ರಸ್ತೆ-ಗುಂಡಿಗಳ ತುಂಬ ರಾಡಿ ನೀರು.
ಗಾಳಿ ಬೀಸಿ, ಮೋಡ ಚದುರಿದರೆ ಒಂದಿಷ್ಟು ಹೂಬಿಸಿಲು.
ಕೋಣೆಯ ಮೂಲೆಗಳಲ್ಲಿ, ನನ್ನೆದುರಿನಲ್ಲೆ
ರಾರಾಜಿಸುತ್ತಿರುವ ಜೇಡಬಲೆ.
ಕಸಗೂಡಿಸುವಾಗ ಕಾಣಿಸದಿರುವ ಪುರಾತನ ಕಲೆ.

ಗಾಳಿಗೆ ಚೌರಿ ಬೀಸಿ ಬೀಸಿ ಸೋತ ತೆಂಗಿನ ಗರಿ.
ವರುವರುಷ ಮೇಲಕ್ಕೇರುತ್ತಲೇ ಇದೆ ತೇರಿನ ಮರ.
(ಅಕಸ್ಮಾತ್ ಬಿದ್ದುಬಿಟ್ಟರೆ?)
ತುದಿಯಲ್ಲಿ ಕಳಸವಿಟ್ಟಂತೆ ಹಾಯಾಗಿ ಕುಳಿತ ಬಣ್ಣದ ಹಕ್ಕಿ.
ಬಯಲಲ್ಲಿ ಶ್ರಾವಣದ ಹುಲ್ಲು ಮೇಯುವ ಎಮ್ಮೆಗಳ ಹಿಂಡು.
(ಮನೆಯಲ್ಲಿ ಗೌಳಿಯ ಹಾಲು ನೀರೆ.)
ಮುಂದಿನೆರಡೂ ಕಾಲು ಮೇಲೆತ್ತಿ ಬೇಲಿಗೆ - ಗಸಗಪತಿನ್ನುವಾಡು,
ಎದ್ದು ಓಡಿಸಿದಾಗ ಕದ್ದು ನೋಡುತ್ತಾನೆ ಕಾಯುವ ಹುಡುಗ.
ಅರ್ಧ ತೊಯ್ದಿರುವ ಅಂಗಿ, ಚೊಣ್ಣ; ಅವನಿಗಿಂತಲೂ ಉದ್ದ ಬಡಿಗೆ.

ಹೂವಿನ ಗೆಜ್ಜೆ ಕಟ್ಟಿ ನಿಂತ ಗಿಡ್ಡ ಗೌರಿ ಹೂ-ಗಿಡ ಸಾಲು,
ಹಿಡಿಹಿಡಿ ಉದುರಿಬಿದ್ದಿವೆ ಮೃದುವಾದ ಪಕಳೆ - ಮಣ್ಣುಪಾಲು.
ರಾತ್ರಿಯಲ್ಲರಳಿ ಮುಂಜಾನೆ ಮುದುಡಿದ ಬ್ರಹ್ಮಕಮಲ,
ಮುಳ್ಳು-ಕಳ್ಳಿ-ಕುಂಡಗಳಲ್ಲಿ ತುಂಬಿದ ಕಮಂಡಲ.
ದಾಳಿಂಬೆ ಗಿಡದಲ್ಲಿ ನಿತ್ಯ ಇಣಚಿಗಳ ಕಾಟ,
ಅರ್ಧಮರ್ಧ ತಿಂದು ಟೊಕಳೆ ಉಳಿಸಿದ ಹಣ್ಣು-ಕಾಯಿ.

ಹೊರಗೆ ಹೊರಟಾಕ್ಷಣವೆ
ಹೇಳಿಕಳಿಸಿದ ಹಾಗೆ ಹನಿದು ಜಿನುಗುಡುವ ಮಳೆ,
ಹೇಗೋ ಬಸ್ಸು ಹಿಡಿದು ಪೇಟೆಗೆ ಹೋದಾಗ -
ನನ್ನ ಹಾಗೇ ಎಲ್ಲರೂ ಗಡಿಬಿಡಿಯಲ್ಲಿ ತಿರುಗಿ ಮರಳುವವರೆ.
ಆದರೆ,
ಅಲ್ಲೊಂದು ಕಡೆ ತಟಸ್ಥವಾಗಿದ್ದಾರೆ ಸಾಲಾಗಿ ಹೆಣ್ಣು-ಗಂಡು,
ಮಕ್ಕಳು - ಮರಿ,
ಚಿಮಣಿ ಎಣ್ಣೆಗೆ ಕಾದು ರಸ್ತೆಯುದ್ದಕ್ಕೂ,
ದೂರದರ್ಶನದಲ್ಲಿ ಓಡುತ್ತಾರೆ ಅವರು ಪಂಜು ಹಿಡಿದು
ಇವರು ಸೋತು ನಿಂತಿದ್ದಾರೆ ಕೈಯಲ್ಲಿ ಖಾಲಿ ಡಬ್ಬಿ ಹಿಡಿದು
ಮೇರಾ ಭಾರತ ಮಹಾನ್.
ಬೀದಿ ದೀಪಗಳಲ್ಲಿ ಕೆಲವಾದರೂ ಹತ್ತಿಕೊಂಡಿವೆ.
ನಡುಕ ಹುಟ್ಟಿಸುವ ಚಳಿಗಾಳಿ,
ಮತ್ತೆ ಇರುಳೆಲ್ಲ ಜಿಟಿ ಜಿಟಿ ಮಳೆ.

ಅರಬ್ ಕವಿತೆಗಳು

೨೦ನೇ ಶತಮಾನಕ್ಕೊಂದು ಕನ್ನಡಿ

ಹುಡುಗನ ಮುಖವನ್ನು ಹೊತ್ತಿರುವ ಶವದ ಪೆಟ್ಟಿಗೆ,
ಕಾಗೆಯ ಹೊಟ್ಟೆಯ ಮೇಲೆ ಬರೆದ
ಪುಸ್ತಕ.
ಹೂವಿನಲ್ಲಡಗಿರುವ ಕಾಡು ಪಶು.
ಹುಚ್ಚನ ಪುಪ್ಪುಸಗಳಿಂದ ಉಸಿರಾಡಿಸುವ
ಬಂಡೆ;
ಇದೇ ಅದು
೨೦ನೇ ಶತಮಾನ.

ಮಸೀದಿಯ ಮಿನಾರ್

ಯಾರೋ ಒಬ್ಬ ಹೊರಗಿನವ ಬಂದಿಳಿದ,
ಮಸೀದಿಯ ಮಿನಾರ್ ಅತ್ತಿತು,
ಅವನದನ್ನು ಕೊಂಡು
ಅದರ ಮೇಲೊಂದು ಹೊಗೆಕೊಳವೆ ಏರಿಸಿದ.

ಅಡೋನಿಸ್
(ಅಲಿ ಅಹಮ್ಮದ್ ಸಯೀದ್)

ಹುಡುಗಿ ಪಾತರಗಿತ್ತಿ ಹುಡುಗಿ

ತಾನೊಂದು ಪಾತರಗಿತ್ತಿಯಾಗಿ ಹುಡುಗಿ
ಕನಸು ಕಂಡಳು, ಎಚ್ಚೆತ್ತಳು,
ಪಾತರಗಿತ್ತಿಯೆಂದು ಕನಸು ಕಾಣುತ್ತಿದ್ದ ಹುಡುಗಿ ತಾನೆ?
ಅಥವಾ

ಪಾತರಗಿತ್ತಿ ತಾನೊಂದು ಹುಡುಗಿಯಾಗಿ
ಕನಸು ಕಾಣುತ್ತಿತ್ತೆ?
ಅವಳಿಗೆ ಗೊತ್ತಿರಲಿಲ್ಲ.

ನೂರಾರು ವರುಷಗಳಾದ ಮೇಲೆ
ಮಕ್ಕಳೆ
ಇರುಳಿನ ಗಾಳಿ,
ಅದು ಹುಡುಗ ಮತ್ತು ಹುಡುಗಿಯೆಂದು ಕನಸು ಕಂಡು
ಹುಡುಗ ಮತ್ತು ಹುಡುಗಿ
ಪಾತರಗಿತ್ತಿಯಂತೆ ನಲಿದಾಡುತ್ತಿದ್ದರೆ?
ಅಥವಾ
ಒಬ್ಬ ಹುಡುಗ, ಒಂದು ಹುಡುಗಿ ತಾವೇ ಪಾತರಗಿತ್ತಿಯೆಂದು
ಕನಸು ಕಾಣುತ್ತಿದ್ದರೆ?
ಗಾಳಿ ಬಲವಾಗಿ ಬೀಸಿತು
ಮಕ್ಕಳೆ,
ಪಾತರಗಿತ್ತಿಯೊಂದು
ಹೊರಗೆ ಚೂರುಚೂರಾಗಿ ಬಿದ್ದಿತು.

ಉನ್ನಿಅಲ್ ಹಾಜ್

ಅಂಚೆಯಾಳಿನ ಅಂಜಿಕೆ

ಎಲ್ಲಾ ಕಡೆಯ ಕೈದಿಗಳೆ
ನಿಮ್ಮಲ್ಲಿರುವುದನ್ನೆಲ್ಲ ನನಗೆ ಕಳುಹಿಸಿ-
ಅಂಜಿಕೆ, ಚೀರಾಟ, ಬೇಸರಿಕೆ - ಎಲ್ಲ.
ಕರಾವಳಿಯ ಎಲ್ಲ ಮೀನುಗಾರರೆ
ನಿಮ್ಮ ಬಳಿಯಿರುವುದನ್ನೆಲ್ಲ ನನಗೆ ಕಳುಹಿಸಿ

ಬರಿದಾಗಿರುವ ಬಲೆಗಳನ್ನು, ಸಮುದ್ರ ಪಿತ್ತವನ್ನು,
ಎಲ್ಲೆಡೆಯ ರೈತರೆ
ನಿಮ್ಮ ಸೊತ್ತನ್ನೆಲ್ಲ ನನಗೆ ಕಳುಹಿಸಿ
ಹೂವುಗಳು, ಚಿಂದಿ ಬಟ್ಟೆಗಳು
ತರಿದೊಗೆದ ಸ್ತನಗಳು
ಬಗಿದು ಹಾಕಿದ ಬಸಿರುಗಳು
ಕಿತ್ತೆಸೆದ ಉಗುರುಗಳು
ನನ್ನ ವಿಳಾಸಕ್ಕೆ... ಯಾವುದೇ ಕೆಫೆ
ಜಗತ್ತಿನ ಯಾವುದಾದರೂ ಬೀದಿ.
ಎಲ್ಲೆಡೆಗೂ ಹರಡಿರುವ ದುಃಖಿತರೆ,
ಮನುಷ್ಯನ ನೋವು ನರಳಾಟಗಳನ್ನು ಕಲೆ ಹಾಕಿ
ನಾನೊಂದು 'ದೊಡ್ಡಫೈಲು' ತಯಾರಿಸುತ್ತಿದ್ದೇನೆ.
ಹಸಿದವರ ತುಟಿಗಳಿಂದ, ಇನ್ನು ಕಾಯುತ್ತಿರುವವರ
ಕಣ್ಣೆವೆಗಳಿಂದ
ಅದಕ್ಕೊಮ್ಮೆ ಸಹಿ ಬಿದ್ದೊಡನೆಯೇ
ಅದನ್ನು ದೇವರ ಕೈಗೆ ಒಪ್ಪಿಸುತ್ತೇನೆ.
ಆದರೆ ನನಗಿರುವ ದೊಡ್ಡ ಹೆದರಿಕೆಯೆಂದರೆ
ದೇವರೂ 'ನಿರಕ್ಷರಿ'ಯಾಗಿದ್ದರೆ?

ಮಹಮ್ಮದ್ ಅಲ್ ಮಾಘುಟ್

ಹೊಸ ವರುಷ

ಹೊಸ ವರುಷವೆ, ನಮ್ಮ ಮನೆಗೆ ಬರಬೇಡ,
ಪಿಶಾಚಿ ಪ್ರಪಂಚದ ಪ್ರತಿಧ್ವನಿಗಳು ನಾವು.
ಜನ ನಮ್ಮ ಕೈಬಿಟ್ಟಿದ್ದಾರೆ.
ಇರುಳು, ಹಾಗೆಯೇ ಗತಕಾಲ ನಮ್ಮಿಂದ ಜಾರಿ ಹೋಗಿದೆ.
ದೈವ ನಮ್ಮನ್ನು ಮರೆತು ಬಿಟ್ಟಿದೆ.
ಬಯಕೆಯೆಲ್ಲ ಬರಿದಾಗಿವೆ, ಆಶೆ ಬತ್ತಿ ಹೋಗಿದೆ.
ನಮಗೆ ನೆನಪುಗಳೂ ಇಲ್ಲ, ಕನಸೂಗಳೂ ಇಲ್ಲ:
ನಮ್ಮ ಪ್ರಶಾಂತ ಮುಖಗಳು ಕಳೆಗೆಟ್ಟು
ತೇಜೋಹೀನವಾಗಿವೆ.
ಪಶ್ಚಾತ್ತಾಪದ ಅರಿವೇ ಇಲ್ಲದೆ
ಕಾಲದಿಂದ ಶೂನ್ಯಕ್ಕೆ ಕತ್ತರಿಸಿ ಹೋಗಿದ್ದೇವೆ.
ಮೆತ್ತಗಿನ ಅರಮನೆಗಳಲ್ಲಿ
ಸುಮ್ಮನೆ ಬದುಕುತ್ತ ಸಾಗಿದ್ದೇವೆ.
ಹೊಸ ವರುಷವೆ ಮುಂದೆ ಸಾಗು-
ನಾವು ಎಚ್ಚರಗೊಳ್ಳುವ ಲಕ್ಷಣವೇ ಇಲ್ಲ:
ನಮ್ಮರಕ್ತನಾಳಗಳನ್ನು ಪೊಳ್ಳು ಕಡ್ಡಿಗಳಿಂದ ಮಾಡಿದೆ.
ರಕ್ತದಲ್ಲಿ ಕ್ರೋಧ ಹರಿಯುವದೇ ನಿಂತು ಹೋಗಿದೆ,
ಆತ್ಮ ಸ್ಫೋಟಗೊಳ್ಳುವದೆಂದು ಯಾರು ಹೇಳಿದರು?
ನಾವೆಲ್ಲ ಸತ್ತು ಹೋಗಿ, ನಮ್ಮನ್ನು ಗೋರಿಗಳೂ ತಿರಸ್ಕರಿಸಿದ್ದರೆ
ಚೆನ್ನಾಗಿತ್ತೇನೊ.
ಕಾಲವನ್ನು ವರುಷಗಳಿಂದ ಮಾತ್ರ ನಾವು ಅಳೆಯಬಲ್ಲವರಾದರೆ
ಒಂದು ಪ್ರದೇಶಕ್ಕೆ ಸೇರಿದವರೆಂಬ ಭಾವನೆ ನಮಗಿದ್ದಿದ್ದರೆ
ನಾವು ಹುಚ್ಚಿಗೆ ಅಂಜುವವರಾಗಿದ್ದರೆ

ದೇಶ ಸಂಚಾರ ನಮ್ಮ ಪ್ರಾಣಗಳನ್ನು ಒಡೆದು ಹಾಕುವಂತಿದ್ದರೆ
ನಾವೂ ಉಳಿದವರಂತೆ ಸಾಯಬಲ್ಲವರಾಗಿದ್ದರೆ,

ನಾಝಿಕ್ ಅಲ್-ಮಲೈಕಾ

'Modern poetry of the Arab world'
ಇಂಗ್ಲಿಷಿಗೆ ಅನುವಾದಿಸಿ ಸಂಪಾದಿಸಿದವರು : ಅಬ್ದುಲ್ಲಾ ಅಲ್-ಉಧಾರಿ

ಆಫ್ರಿಕನ್ ಕವಿತೆಗಳು

ಕೆರಳಿದ ಪೀಳಿಗೆ

(The rise of the angry generation)

ಕನಸಿನಿಂದೆಚ್ಚೆತ್ತು ರಕ್ಕೆ ಬೀಸಿದೆ ಮಹಾ ಗರುಡ,
ಚೆದರಿ ಬಿದ್ದಿವೆ ಶೈಶವದ ಚಿಪ್ಪು,
ಅರುಣೋದಯದ ಮೇಲೆ ಉಗ್ರ ದೃಷ್ಟಿಯನಿಟ್ಟು
ಕತ್ತಲೆಯಿಂದ ಭೂಮಿಯನ್ನು ಮುಚ್ಚಿಬಿಡುವಂತೆ,
ಗೂಡು ಕಟ್ಟುತಿದೆ ಸುಂದರ ಪಕ್ಷಿ ಹಣ್ಣೆಲೆಗಳಿಂದ
ಸಜ್ಜುಗೊಳಿಸುತ ಮೂಲ ಸಸ್ಯದ ಟೊಂಗೆ ಟಿಸಿಲುಗಳ-
ಅದನು ಮರೆಮಾಡಿಹುದು ಕೆಂಪು ಗರಿಗಳಿಂದ,
ತನ್ನ ಕೋಪ ತಾಪದ ಬಗೆಗೆ ಭೂಮಿಗೆಚ್ಚರಿಕೆ ನೀಡುವಂತೆ,
ಭಯದಿಂದ ಒಮ್ಮೆ ಹೆಮ್ಮೆಯ ಗ್ರಹವು ಚೀತ್ಕರಿಸಿ
ನಿಗೂಢ ತರುಣ ಪಕ್ಷಿಗೆ ತೆರೆದು ವಿಸ್ತಾರದಾಕಾಶ
ಹೊಸ ಪೀಳಿಗೆಯ ನಿಷ್ಕರುಣ ಮೊನೆಯುಗುರುಗಳಿಗೆ
ಮೋಸದಲಿ ಕರೆವ ಕಣ್ಣೀರಿಗವರು ಹಿಂಜರಿಯದವರು.
ಕಬ್ಬಿಣದ ಮಕ್ಕಳವರು
ಇರುಳ ನಿರ್ಭಯದ ಜೇನುಗಳು
ಜ್ವಾಲಮುಖಿ ಪರ್ವತದ ಕ್ರೋಧ ಕೇತನಗಳು
ಅವರೆ ಪ್ರಾಚೀನ ಪಿತೃಗಳ ಕೊನೆಬಾಳುವ ರೋಷ ಭೀಷಣರು.

Mazisi Kunene

ಗುಡಿಸಲಿನ ಆಯ್ಕೆ
(Choosing a Cottage)

ರೋಷದ ನಗರಗಳಿಂದ ಶೀತಲ ಗ್ರಾಮಗಳಿಗೆ ಬರುವವರೆ
ನಿಮ್ಮ ಗುಡಿಸಲವ ನೋಡಿ ಚೆನ್ನಾಗಿ ಆಯ್ಕೆ ಮಾಡಿ.
ಮಳೆಗಾಲದಲ್ಲಿ ನಿಮ್ಮನದು ಬೆಚ್ಚಗಿಡಬೇಕು
ಮೋಡಗಳೇರಿ ಬಂದು ನಿರಂತರ ನೀರು ಸುರಿದಾಗ
ಕೆಲವರಿಗೆ ಇದು ಮನೆಯಾಗಬಹುದು.
ಬೇಲಿಯ ಪೊದೆಯ ಸಾಲು, ಬಡಕಲು ಗಿಡಗಳು
ಕಪ್ಪುಮಣ್ಣು ನಿಮಗೆ ಉತ್ತರವ ದಕ್ಷಿಣದಿಂದ ಭೇದಿಸುವದು:
ಬೀಳು ಬಯಲಿಂದ ಬೆಟ್ಟಗಳ ಪ್ರತ್ಯೇಕಿಸುವದು.

ಸೀಸದ ಚೌಕಟ್ಟಿನ ಕಿಡಕಿಗಳಿಂದ ಹಳ್ಳಿ ಬೀದಿಗೆ ಇಣುಕಿ ನೋಡಿ:
ಬೆರಿ ಹಣ್ಣುಗಳ ಕುಕ್ಕುವ ಪಕ್ಷಿಗಳ ಹೆಸರು ಗುರುತಿಸದ
ಇರುಳು ಚಿತ್ರಹಿಂಸೆಗೀಡಾದ ಅಸಹಾಯ ಅರಚುಗಳ
ಶಮನಗೊಳಿಸಲಾರದ, ಕೋಣೆಯಿಂದ ಕೋಣೆಗೆ
ಕದಲುವ ಅಮೃತಶಿಲೆಯಂಥ ಮುಖ-
ಬತ್ತಿದುಸಿರಿಂದ ಮಂಜಾದ ಕಿಟಕಿ ಗಾಜನ್ನೊರಸಿ,
ಬೇರೆ ಕಡೆ ಎಲ್ಲಾ ಯಥಾಪ್ರಕಾರವೆಂದು ಭಾವಿಸಿ-
ವಿಧಿವತ್ತಾಗಿ ಪ್ರಶ್ನಿಸುವವನ ಬಿಳಿಯರ ಕನಸು ಮುಂದುವರಿದಿದೆಯೆಂದು.

ಹೊಳೆಬದಿಗೆ ಸ್ಥಳದ ಕಲ್ಲುಗಳಿಂದ ಕಟ್ಟಿ, ಹುಲ್ಲು
ಹೊಚ್ಚಿದ ಚಾವಣಿಯ, ಓಮಗಿಡ, ಸಸ್ಯಮೂಲಿಕೆ ನಡುವೆ
ಹಾಯ್ದು, ಬಾಗಿಲವರೆಗೆ ನೇರದಾರಿಯ ಗುಡಿಸಲು,
ಚಳಿಗಾಲದ ತಡವಾದ ಸೂರ್ಯನ ನಸುಗೆಂಪು ತಳೆದು.
ಹಳ್ಳಿ ಬಾಳಿನ ಚಿತ್ರ ಕಾಣುವದು - ಅನುರೂಪದ ಚಿತ್ರದಂಚೆಯ ಕಾರ್ಡು

ಆದರಿನ್ನುಳಿದವರು, ಎತ್ತರದ ಗೋಡೆಯ ಹಿಂದೆ, ಸಮುದ್ರ
ಸುತ್ತುವರಿದವರು, ಅವರ ಗತಿಯೇನು - ಪರಿಭಾವಿಸು.


ಇದು ಗೊತ್ತಿರಲಿ, ಯಾವ ಕಾಟ್ಸವೋಲ್ಡ್ ಗುಡಿಸಲೂ
ಮುಕ್ತಗೊಳಿಸದು ನಿನ್ನ ಗತಕಾಲದಿಂದ. ಥಂಡಿಗೆ ಹೊದ್ದು,
ಮಳೆಮಾರನೆದುರಿಸಿ, ನಾಯ ತಿರುಗಾಟಕೊಯ್ದಾಗ ಗಡಿಯಲ್ಲಿ
ಸಾವು, ಊರ ಚೌಕದಲಿ ಸಾವು ಹಿಡಿದುಕೊಂಡಿದೆ
ನಮ್ಮನಿನ್ನೂ ಚಹ ಕುಡಿದು ಬೆಚ್ಚಗೆನಿಸಿದಾಗಲು
ಮರೆಯಕೂಡದು ನಾವು ಅವನನ್ನು ಅಥವಾ ಅವಳನ್ನು.
ಗುಡಿಸಲುಗಳಲ್ಲಿ ಬಂದು ನೆಲಸುವ ನೀವು ಸರಿಯಾಗಿ
ಆಯ್ಕೆ ಮಾಡಿ. ಯಾರಿಗೂ ದ್ರೋಹ ಬಗೆಯದಿರಿ,
ಸ್ವೀಕರಿಸಿ ಕಪ್ಪಲ್ಲದ ಬಿಳಿದಲ್ಲದ ಬೂದು ಬಣ್ಣ.

Mike Nicol

ಚಕ್ರದಂತೆ
(Like a wheel)

ಇದು ನೋಡು ಚಕ್ರದಂತೆ
ಇದು ತಿರುಗುತ್ತದೆ
ಇಂದು ನಾನು
ನಾಳೆ ನೀನು.

ಇಂದು ಹಸಿದವ ನಾನು
ನಾಳೆ ನೀನು,
ಮನೆಯಿಲ್ಲವಿಂದು ನನಗೆ
ನಾಳೆ ನಿನಗೆ.



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

"'ಜೀನಿಯಾ' ಕಣವಿಯವರ ಹನ್ನೆರಡನೆಯ ಕವನ ಸಂಗ್ರಹ. ನಿಡಿದಾದ ಈ ಕಾವ್ಯ ಪಯಣದ ಮಾರ್ಗಾಯಾಸದ ಗುರುತುಗಳು ಇಲ್ಲಿ ಕಾಣುವುದಿಲ್ಲ ಎಂಬುದೇ ಮೊದಲು ಹೇಳಬೇಕಾದ ಮಾತು. ಜೀವನ ಶ್ರದ್ಧೆ, ಕಾವ್ಯೋತ್ಸಾಹ, ಸಡಿಲಾಗದ ಕಾವ್ಯಬಂಧ ಮತ್ತು ಚಿತ್ರಗಳ ಮೂಲಕ ಆಲೋಚಿಸುವ ಕಾವ್ಯ ಕ್ರಮ ಈ ಸಂಗ್ರಹದಲ್ಲಿಯೂ ಕಾಣುವುದಲ್ಲದೆ ಸಂಗ್ರಹದಿಂದ ಸಂಗ್ರಹಕ್ಕೆ ಈ ಅಂಶಗಳು ಕುಸಿಯದೆ ಇರುವುದು ಕೂಡ ಅಚ್ಚರಿ ಹುಟ್ಟಿಸುವ ಅಂಶ.........

"ಈ ಸಂಗ್ರಹದಲ್ಲಿ ಎಂದಿನಂತೆ ಕವಿ ಸದ್ಯತನದ ಧ್ವನಿಯಾಗುತ್ತಲೇ ಆ ಸದ್ಯತನದ ಅಭಿವ್ಯಕ್ತಿಗೆ ಬಳಸುವ ಪ್ರಾಕೃತಿಕ ಚಿತ್ರಗಳ ಮೂಲಕ ಒಂದು ನಿರಂತರ ಸ್ವರೂಪವನ್ನು ಕಣವಿಯವರು ತಮ್ಮ ಕಾವ್ಯಕ್ಕೆ ಒದಗಿಸುತ್ತಾರೆ. ಕೆ.ಎಸ್.ನ. ಅವರನ್ನು ಬಿಟ್ಟರೆ ಚಿತ್ರಕ ಶಕ್ತಿಯಲ್ಲಿ ಕಣವಿಯವರ ಶಕ್ತಿ ಆಧುನಿಕ ಕಾವ್ಯ ಸಂದರ್ಭದಲ್ಲಿ ವಿಶಿಷ್ಟವಾದುದು".

– ಡಾ॥ ಎಚ್.ಎಸ್. ವೆಂಕಟೇಶ ಮೂರ್ತಿ
'ಕನ್ನಡ ಪ್ರಭ' ೪-೧೧-೧೯೯೦

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
9. ರಮ್ಯ, ಗೋಕುಲ 3ನೇ ಹಂತ, ಮೈಸೂರು-2